ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 14 ಜೂನ್ 17, 1979 40 ಪೈಸೆ

ಇಂದಿರಾ ಮೇಲೆ ಗದಾ ಪ್ರಹಾರ

"ಚುನಾವಣೆಯು ಮುಗಿದ ಮೇಲೆ ಕಾಂಗ್ರೆಸ್ ಪಕ್ಷವು ಛಿದ್ರವಾಗಿ ಹೋಗಲಿದೆ" ಎಂಬುದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಮ್. ಎಸ್. ನಂಬೂದಿರಿಪ್ಪಾದರು 1977ರ ಲೋಕಸಭಾ ಚುನಾವಣಾ ಸಂದರ್ಭ ಪತ್ರಿಕಾ ಗೋಷ್ಠಿಯಲ್ಲಿ ಸಾರಿದ್ದರು. ಲೋಕಸಭಾ ಚುನಾವಣೆಯ ನಂತರದ ಬೆಳವಣಿಗೆಗಳು, ಅಂದರೆ ಇಂದಿರಾ ಕಾಂಗ್ರೆಸ್ ಎರಡಾದ್ದು, ಮತ್ತೆ ಬೇರೆ ಬೇರೆ ರಾಜ್ಯಗಳಲ್ಲಿ ಈ ಎರಡೂ ಕಾಂಗ್ರೆಸ್‌ಗಳಲ್ಲಿ ಒಳಜಗಳಗಳು ತೀವ್ರವಾದದ್ದು, ಮಹಾರಾಷ್ಟ್ರದಲ್ಲಿ ಶರದಪವಾರ ಅವರು ಇಂದಿರಾಗಾಂಧಿಯ ಸರ್ವಾಧಿಕಾರ ಧೋರಣೆಗಳನ್ನು ವಿರೋಧಿಸಿ ಹೊರಬಂದದ್ದು, ಇದೀಗ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ (ಐ) ಎರಡಾಗುವುದು-ಇವೆಲ್ಲಾ ಇ. ಎಮ್. ಎಸ್. ರವರು ಹೇಳಿದ್ದು ಎಷ್ಟು ಸತ್ಯವಾಗಿದೆ ಎಂಬುದನ್ನು ತೋರಿಸುತ್ತವೆ.

ತನ್ನ ಮತ್ತು ಸಂಜಯಗಾಂಧಿ ಕೂಟದ ವೈಯಕ್ತಿಕ ಲಾಭಕ್ಕಾಗಿ ಏಕವ್ಯಕ್ತಿ ಮತ್ತು ಏಕ ಪಕ್ಷದ ಸರ್ವಾಧಿಕಾರ ನಡೆಸಿದ ಇಂದಿರಾಗಾಂಧಿಗೆ ಲೋಕಸಭಾ ಚುನಾವಣೆ ನಡೆದು, ಜನತೆಯು ಈಕೆಯನ್ನು ಅಧಿಕಾರದಿಂದುರುಳಿಸಿದರೂ ಬುದ್ಧಿ ಬಂದಿಲ್ಲ. ಬದಲು ತಾನು ಮತ್ತು ಸಂಜಯ ದುಷ್ಟಕೂಟ ನಡೆಸಿದ ಅತ್ಯಾಚಾರಗಳನ್ನೆಲ್ಲಾ ಸಮರ್ಥಿಸಿ, ಮತ್ತೆ ಅಧಿಕಾರದ ಗದ್ದುಗೆಯನ್ನೇರಲು ಹವಣಿಸುತ್ತಾ, ತನ್ನ ಸರ್ವಾಧಿಕಾರ ಮಹತ್ವಾಕಾಂಕ್ಷೆಗಳಿಗೆ ಅಡ್ಡಬಂದವರನ್ನೆಲ್ಲಾ ಮಟ್ಟುಗೋಲು ಹಾಕಲು ಶ್ರಮಿಸುತ್ತಾ ಬಂದ ಇಂದಿರಾಳ ಧೋರಣೆ

ಸಂಪಾದಕೀಯ

ಯಿಂದ ಕಾಂಗ್ರೆಸ್ (ಐ) ಮತ್ತೆ ಇಬ್ಭಾಗವಾಗುತ್ತಲಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಸಮಿತಿಯನ್ನು ರದ್ದುಗೊಳಿಸಿ, ಅಡಹಾಕ್ ಸಮಿತಿಯನ್ನು ನೇಮಿಸುವ ಕ್ರಮದಿಂದ ಇಂದಿರಾ ಕೋಟೆಯೆನಿಸಿದ ಕರ್ನಾಟಕದಲ್ಲಿ ತೀವ್ರ ರಾಜಕೀಯ ಬದಲಾವಣೆಗಳು ಆಗುತ್ತಲಿವೆ. ಇದರ ಪರಿಣಾಮ ಕೇವಲ ಕರ್ನಾಟಕಕ್ಕೆ ಸೀಮಿತವಾಗಿರದೆ, ರಾಷ್ಟ್ರದಾದ್ಯಂತವೂ ಪ್ರತಿಫಲನಗೊಳ್ಳಲಿದೆ.

ಇಂದಿರಾಗಾಂಧಿಯ ಸರ್ವಾಧಿಕಾರ ಕ್ರಮ ಮತ್ತು ಸಂಜಯ ದುಷ್ಟಕೂಟದ ಪ್ರಯತ್ನದ ಪರಿಣಾಮ ಇಂದು ಕಾಂಗ್ರೆಸ್ (ಐ) ಮತ್ತೆ ಹೋಳಾಗುತ್ತಲಿದೆ. ತಡವಾಗಿಯಾದರೂ ದೇವರಾಜ ಅರಸು ಮತ್ತವರ ಬಳಗದವರು ಇಂದಿರಾಳ ಸರ್ವಾಧಿಕಾರ ಮತ್ತು ಪ್ರಜಾಪ್ರಭುತ್ವ ವಿರೋಧಿ ಕ್ರಮಗಳ ಪರಿಣಾಮವನ್ನು ಅರಿತು, ದಿಟ್ಟ ನಿಲುಮೆಯನ್ನು ತಳೆದಿರುವುದು ಪ್ರಶಂಸನೀಯ. ಇಂದಿರಾಗಾಂಧಿಯ ಸರ್ವಾಧಿಕಾರ ಮಹತ್ವಾಕಾಂಕ್ಷೆಯಿಂದ ಬರಬಹುದಾದ ಅಪಾಯವನ್ನು ಇನ್ನಾದರೂ ಕರ್ನಾಟಕದ ಜನತೆಯು ಮನಗಾಣುವುದು ಎಂದು ಆಶಿಸಬೇಕಾಗಿದೆ.

ಕಾಂಗ್ರೆಸ್ (ಐ)ಯ ಕರ್ನಾಟಕ ವಿದ್ಯಾಮಾನಗಳು ಮುಂದಿನ ರಾಜಕೀಯ ಶಕ್ತಿ ಸಂಬಂಧಗಳ ಬಗ್ಗೆ ಯಾವರೀತಿಯ ಪ್ರಚೋದನೆ ಮತ್ತು ಪರಿಣಾಮಗಳನ್ನುಂಟುಮಾಡುವವು ಎಂಬುದನ್ನು ಸದ್ಯ ಹೇಳುವಂತಿಲ್ಲವಾದರೂ, ಇಂದಿರಾಳ ಸರ್ವಾಧಿಕಾರ ಆಕಾಂಕ್ಷೆಗಳ ವಿರುದ್ಧ ಬೆಳೆದು ಬಂದ ಈ ಬೆಳವಣಿಗೆಯು ಪ್ರಜಾಪ್ರಭುತ್ವ ಹೋರಾಟದ ದೃಷ್ಟಿಯಿಂದ ಸ್ವಾಗತಾರ್ಹವಾಗಿದೆ. ಇಂದಿರಾ ಕಾಂಗ್ರೆಸ್‌ಗೆ ಮೊದಲಿನಿಂದಲೂ ಬೆನ್ನೆಲುಬಿನಂತಿದ್ದ ಅರಸು ಅವರ ಮೇಲಿನ ಕ್ರಮದಿಂದ ಇಂದಿರಾಳ ಪ್ರತಿಷ್ಠೆಯನ್ನು ತಿಳಿಸಲು ಕಾರಣವಾದ ರಾಜ್ಯದ ರಾಜಕೀಯ ಇನ್ನು ಈಕೆಯ ಅಧಿಕಾರ ಆಕಾಂಕ್ಷೆಗಳನ್ನು ಮಣ್ಣುಗೂಡಿಸುವುದಕ್ಕೆ ಸಹಾಯಕವಾಗುವುದೆಂದು ಆಶಿಸೋಣ. ●

ಯೋಜನೆ ವಿಫಲವಾಗಲು ವರ್ಗ ಉಪೇಕ್ಷೆಯೇ ಕಾರಣ

ವರ್ಗಗಳನ್ನು ಕಡೆಗಣಿಸಿರುವುದರಿಂದಲೇ ಈ ಹಿಂದಿನ ಪಂಚವಾರ್ಷಿಕ ಯೋಜನೆಗಳು ವಿಫಲವಾದವೆಂದು ಪಶ್ಚಿಮ ಬಂಗಾಲದ ಹಣಕಾಸು ಸಚಿವ ಡಾ॥ ಅಶೋಕ ಮಿತ್ರ ಅವರು ಆರನೇ ಪಂಚವಾರ್ಷಿಕ ಯೋಜನೆಯ ಮೇಲೆ ನಗರದಲ್ಲಿ ನಡೆದ ಮೂರು ದಿನಗಳ ಅಖಿಲಭಾರತ ಸಮ್ಮೇಳನವನ್ನು ಉದ್ಘಾಟಿಸುತ್ತಾ ಹೇಳಿದರು. ಯೋಜನೆಗಳನ್ನು ಇಂದಿನ ಆರ್ಥಿಕ ಬಿಕ್ಕಟ್ಟು ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ವಿಮರ್ಶಿಸಬೇಕೆಂದು ಹೇಳಿದ ಡಾ॥ ಅಶೋಕ ಮಿತ್ರ ಅವರು ಯೋಜನೆಯು ಈಗಿರುವ ರೂಪದಲ್ಲೇ ಇದ್ದರೆ ಆರ್ಥಿಕ ಕೇಂದ್ರೀಕರಣಕ್ಕೆ ದಾರಿಮಾಡುವುದೆಂದರು. ರಾಷ್ಟ್ರದ ಸಮಗ್ರ ಬೆಳವಣಿಗೆಗಾಗಿ, ರಾಜ್ಯಗಳಿಗೆ ಹೆಚ್ಚಿನ ಆರ್ಥಿಕ ಸ್ವಾಯತ್ತತೆ ನೀಡಬೇಕಾಗಿದ್ದು, ಆರನೇ ಪಂಚವಾರ್ಷಿಕ ಯೋಜನೆಯು ಈ ಬಗ್ಗೆ ಗಮನವಿತ್ತಿಲ್ಲ ಎಂದರು.

ಯೋಜನಾ ಆಯೋಗವು ಬೃಹತ್ ನೀರಾವರಿ ಯೋಜನೆಗಳ ಬಗ್ಗೆ ಪೂರ್ವಗ್ರಹಪೀಡಿತ ನೀತಿಯಿಂದ ಕೂಡಿದೆ ಎಂದ ಡಾ॥ ಅಶೋಕ ಮಿತ್ರ, ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ ಎಂದರು. ಗ್ರಾಮಾಂತರ ಅಭಿವೃದ್ಧಿಯ ಯೋಜನೆಗಳಿಂದ ಶ್ರೀಮಂತರಿಗೆ ಲಾಭವಾಗುತ್ತಿದೆ ಎಂದೂ ಹೇಳಿದರು. ಅನೇಕ ಧನಸಹಾಯ ಯೋಜನೆಗಳಿದ್ದರೂ ಅವುಗಳಿಂದ ಬಡರೈತರಿಗೆ, ಭೂಹೀನರಿಗೆ, ಕೃಷಿಕೂಲಿಗಾರರಿಗೆ ನೆರವಾಗಿಲ್ಲ! ಅವುಗಳೆಲ್ಲಾ ಶ್ರೀಮಂತರಿಗೇ ನೆರವಾಗಿವೆಯೆಂದ ಡಾ॥ ಅಶೋಕ ಮಿತ್ರ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಬಡವರು ಸಂಘಟಿತರಾಗಲು ಕರೆಯಿತ್ತರು. ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಮತ್ತು ಈ ಬಗ್ಗೆ ಜನರ ಅಭಿಪ್ರಾಯ ರೂಪಿಸಲು ಕರೆಯಿತ್ತರು.

ಭಾರತೀಯ ಸಮಾಜ ವಿಜ್ಞಾನ ಶಾಲೆ (ಇಂಡಿಯನ್ ಸ್ಕೂಲ್ ಆಫ್ ಸೋಷಿಯಲ್ ಸೈನ್ಸಸ್), ಬೆಂಗಳೂರು ಆಶ್ರಯದಲ್ಲಿ ನಗರದಲ್ಲಿ ಜೂನ್ 14, 15, ಮತ್ತು 16 ರಂದು ನಡೆದ ಆರನೇ ಪಂಚವಾರ್ಷಿಕ ಯೋಜನೆಯ ಮೇಲಿನ ಅಖಿಲಭಾರತ ಸಮ್ಮೇಳನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ॥ ಎಚ್. ನರಸಿಂಹಯ್ಯ ವಹಿಸಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕ ಸರಕಾರದ ಯೋಜನಾ ಇಲಾಖೆಯ ವಿಶೇಷ ಕಾರ್ಯದರ್ಶಿ ಡಾ॥ ನಂಜುಂಡಪ್ಪ, ಇಂಡಿಯನ್ ಸ್ಕೂಲ್ ಆಫ್ ಸೋಷಿಯಲ್ ಸೈನ್ಸಸ್, ತಿರುವನಂತಪುರದ ನಿರ್ದೇಶಕ ಡಾ॥ ಜಾಕೋಬ್ ಈಪನ್‌ರವರೂ ಮಾತನಾಡಿದರು. ಬೆಂಗಳೂರು ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲಿನಲ್ಲಿ ನಡೆದ ಉದ್ಘಾಟನಾ ಸಮಾರಂಭದ ಮೊದಲಲ್ಲಿ ಬೆಂಗಳೂರು ಸ್ಕೂಲಿನ ನಿರ್ದೇಶಕ ಡಿ. ಆರ್. ನಾಗರಾಜ್ ಅವರು ಸ್ವಾಗತಿಸಿದರು. ಸ್ಕೂಲಿನ ಛೇರ್‌ಮನ್ ಡಾ॥ ಚಂದ್ರಶೇಖರ್ ಅವರು ಸ್ಕೂಲಿನ ಉದ್ದೇಶಗಳನ್ನು ವಿವರಿಸಿ, ವಿಷಯದ ಪ್ರಸ್ತಾವನೆ ಮಾಡಿದರು. ರಾಷ್ಟ್ರದ ಮತ್ತು ರಾಜ್ಯದ ನಾನಾ ಕಡೆಯಿಂದ ಬಂದ ಸುಮಾರು 60 ಮಂದಿ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ●

ಹತ್ತಿ ಗಿರಣಿ ಕಾರ್ಮಿಕರ ಯಶಸ್ವಿ ಸಾಂಕೇತಿಕ ಮುಷ್ಕರ

ಬೆಂಗಳೂರು ನಗರದಲ್ಲಿರುವ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನಿಗೆ ಸೇರಿದ ಮೈಸೂರು ಮಿಲ್ಲು ಮತ್ತು ಮಿನರ್ವ ಮಿಲ್ಲಿನ ಸುಮಾರು 6000 ಕಾರ್ಮಿಕರು ಹೋರಾಟದ ಮಾರ್ಗವನ್ನು ಹಿಡಿದಿದ್ದರು. ಮೈಸೂರು ಮಿಲ್ಲಿನಲ್ಲಿ ಸಿ. ಐ. ಟಿ. ಯು. ಯೂನಿಯನ್ನು ಸ್ಥಾಪನೆಯಾದ ಮೇಲೆ ಸಿ.ಐ.ಟಿ.ಯು. ವಿನ ಮುತುವರ್ಜಿಯಿಂದ ಕಾರ್ಮಿಕರ ಸಂಘಟನೆಗಳ ಸಂಯುಕ್ತ ಹೋರಾಟಕ್ಕೆ ಪ್ರಾರಂಭವಾಯಿತು. ಇತರ ರಾಜ್ಯಗಳಲ್ಲಿ ಹತ್ತಿ ಗಿರಣಿ ಕಾರ್ಮಿಕರಿಗೆ ಸುಮಾರು ರೂ. 500 ಮಾಸಿಕ ವೇತನ ದೊರೆಯುತ್ತಿದ್ದು, ಕರ್ನಾಟಕ ರಾಜ್ಯದಲ್ಲಿ ಸುಮಾರು ರೂ. 370 ರಷ್ಟು ಮಾತ್ರ ದೊರೆಯುತ್ತಿದೆ. ಬೇರೆ ರಾಜ್ಯಗಳಲ್ಲಿ ಸಿಗುವಷ್ಟು ವೇತನ ಇಲ್ಲಿಯೂ ಸಿಗಬೇಕೆಂದು ವೇತನ ಸಮಾನತೆಗಾಗಿ ಮತ್ತು ಇತರ ಬೇಡಿಕೆಗಳನ್ನು ಮುಂದಿಟ್ಟು ಸಂಯುಕ್ತ ಹೋರಾಟ ನಡೆಸಲು ಮೈಸೂರು ಮಿಲ್ಲು ಮತ್ತು ಮಿನರ್ವ ಮಿಲ್ಲಿನ ಕಾರ್ಮಿಕರ ಪರವಾಗಿ ಸಿ. ಐ. ಟಿ. ಯು., ಎ. ಐ. ಟಿ. ಯು. ಸಿ. ಮತ್ತು ಐ. ಎನ್. ಟಿ. ಯು. ಸಿ. (ಶ್ರೀರಾಮುಲು ನೇತೃತ್ವದ್ದು) ಸಂಘಟನೆಗಳು ಸಮನ್ವಯ ಸಮಿತಿಯನ್ನು ರಚಿಸಿದ್ದುವು. ಇದಕ್ಕೆ ಶ್ರೀ ರಾಮುಲು ಅವರು ಅಧ್ಯಕ್ಷರಾಗಿಯೂ, ವಿ. ಜಿ. ಕೆ. ನಾಯರ್ ಅವರು ಕಾರ್ಯದರ್ಶಿಗಳಾಗಿಯೂ ನೇಮಿತರಾಗಿದ್ದರು.

ಹೋರಾಟದ ಪಥದಲ್ಲಿದ್ದ ಕಾರ್ಮಿಕರ ಐಕ್ಯತೆಯನ್ನು ಮುರಿಯುವ ಉದ್ದೇಶದಿಂದ ಟೆಕ್ಸ್‌ಟೈಲ್ ಮ್ಯಾನೇಜುಮೆಂಟಿನವರು ಮೈಸೂರು ಮಿಲ್ಲು ಮತ್ತು ಮಿನರ್ವ ಮಿಲ್ಲಿನ ಕಾರ್ಮಿಕ ಪ್ರತಿನಿಧಿಗಳೊಡನೆ ಪ್ರತ್ಯೇಕ ಮಾತುಕತೆ ನಡೆಸುವುದಾಗಿ ಹೇಳಿದರು. ಮ್ಯಾನೇಜುಮೆಂಟಿನ ಕುತಂತ್ರವನ್ನು ಅರಿತು, ಇದಕ್ಕೆ ಒಪ್ಪದೆ ಎರಡೂ ಮಿಲ್ಲಿನ ಕಾರ್ಮಿಕರ ಪ್ರತಿನಿಧಿಯಾಗಿ ರಚಿತವಾದ ಸಮನ್ವಯ ಸಮಿತಿಯೊಡನೆಯೇ ಮಾತುಕತೆ ನಡೆಸಬೇಕೆಂಬ ದಿಟ್ಟ ನಿಲುಮೆಯನ್ನು ತಳೆದು, ಸಮನ್ವಯ ಸಮಿತಿಯು ಮ್ಯಾನೇಜುಮೆಂಟಿನ ಮೇಲೆ ಒತ್ತಾಯ ಹೇರಲು 13-6-79 ರಂದು ಒಂದು ದಿನದ ಸಾಂಕೇತಿಕ ಮುಷ್ಕರಕ್ಕೆ ಕರೆ ನೀಡಿತು. ಮಿನರ್ವ ಮಿಲ್ಲಿನಲ್ಲಿ ಹಿಂದಿನಿಂದಲೇ ಇದ್ದ, ನಂಜುಂಡಪ್ಪ ಎಂಬವರು ಅಧ್ಯಕ್ಷರಾಗಿಯೂ, ರಾಮಕೃಷ್ಣ ಎಂಬವರು ಕಾರ್ಯದರ್ಶಿಯಾಗಿಯೂ ಇರುವ ಸಂಘವು ಹೋರಾಟವನ್ನೂ, ಮುಷ್ಕರವನ್ನೂ ವಿರೋಧಿಸಿತ್ತು.

ಮುಷ್ಕರವು ಯೂನಿಯನ್ನುಗಳ ಒಳಜಗಳಕ್ಕೆ ಸಂಬಂಧಪಟ್ಟದ್ದೆಂದೂ, ಒಂದು ಸಣ್ಣ ವಿಭಾಗ ಇದಕ್ಕೆ ಕರೆಯಿತ್ತಿರುವುದೆಂದೂ ನೆವಹೇಳಿ, ಹೋರಾಟವನ್ನು ವಿಫಲಗೊಳಿಸುವ ಉದ್ದೇಶದಿಂದ ಪೋಲೀಸರು ಸೆಕ್ಷನ್ 35ನ್ನು ಮಿಲ್ಲುಗಳ ವಠಾರದಲ್ಲಿ ಜಾರಿಮಾಡಿದ್ದರು. ಮಿನರ್ವ ಮಿಲ್ಲಿನಲ್ಲಿ ಯೂನಿಯನ್ ಮುಖಂಡರೆಂದುಕೊಳ್ಳುತ್ತಿದ್ದ ನಂಜುಂಡಪ್ಪ ಮತ್ತು ರಾಮಕೃಷ್ಣ ಮುಷ್ಕರವನ್ನು ವಿರೋಧಿಸಿದ್ದರು. ಇಷ್ಟೆಲ್ಲಾ ಆದರೂ, ಪೋಲೀಸರು ಭಯದ ವಾತಾವರಣವನ್ನುಂಟು ಮಾಡಿದ್ದರೂ 13 ರಂದು ಎರಡೂ

(ಕಡೆಯ ಪುಟ ನೋಡಿ)

ಹಳ್ಯಾಳದಲ್ಲಿ ಪೋಲೀಸರ ಅಮಾನುಷ ದಬ್ಬಾಳಿಕೆ

—ಎನ್.ಕೆ. ಉಪಾಧ್ಯಾಯ

"ಪೋರ್ಚುಗೀಸ ಸೈನಿಕರೂ ಈ ರೀತಿ ನಮ್ಮ ಮೇಲೆ ದಬ್ಬಾಳಿಕೆ ಮಾಡಿಲ್ಲ" ಎಂಬ ಉದ್ಗಾರ ತೆಗೆದವರು ಬಾಲಸಿಂಗ. ಇವರು ನನ್ನ ಜೊತೆಯಲ್ಲಿ ಗೋವೆಯ ವಿಮೋಚನಾ ಸತ್ಯಾಗ್ರಹದಲ್ಲಿ ಭಾಗವಹಿಸಿದವರು. ಇವರ ಉದ್ಗಾರ ಹೊರ ಬಂದದ್ದು ತಾ. 7 ರಂದು ಪೋಲೀಸರು ಹಳ್ಯಾಳದಲ್ಲಿ ಶಾಂತ ರೀತಿಯಿಂದ ಮತಪ್ರದರ್ಶನ ಮಾಡುತ್ತಿದ್ದ 3000 ರೈತರ-ರೈತ ಕಾರ್ಮಿಕರ ಮೇಲೆ ನಡೆಸಿದ ರಾಕ್ಷಸೀ ದಬ್ಬಾಳಿಕೆ ಕುರಿತು.

ಪಾರ್ಟಿ ಆದೇಶದ ಮೇರೆಗೆ ನಾನು, ವಿದ್ಯಾರ್ಥಿ ಫೆಡರೇಶನ್ನಿನ ಮುಖಂಡ ಜಿ. ನಾಗರಾಜ ಜೊತೆಯಲ್ಲಿ ಹಳಿಯಾಳ ಅದರ ಸುತ್ತ ಮುತ್ತ ಹಳ್ಳಿಗಳನ್ನು ತಾ. 10ರಂದು ಸಂದರ್ಶಿಸಿದೆ. ಪೋಲೀಸರ ಅತ್ಯಾಚಾರ ಹಳ್ಳಿಯ ಜನರಲ್ಲಿ ಹೆಚ್ಚಿನ ಉತ್ಸಾಹ ತುಂಬಿದಂತೆ ಕಂಡು ಬಂತು. ಅದರಲ್ಲೂ 70-80 ವರ್ಷದ ಮುದುಕರ ಹಸನ್ಮುಖ ಕಂಡು ನನ್ನ ಮೈಯಲ್ಲಿ ಹೊಸ ಹುರುಪಿನ ತೆರೆಗಳು ಓಡಾಡಹತ್ತಿದವು. ಪೋಲೀಸ್ ದಬ್ಬಾಳಿಕೆ ಜನರ ಹೋರಾಟದ ಉತ್ಸಾಹವನ್ನು ಕುಗ್ಗಿಸಲು ಶಕ್ತವಿಲ್ಲೆಂಬ ವಿಷಯ ಚರಿತ್ರೆಯ ಹಲವಾರು ಘಟನೆಗಳಿಂದ ತಿಳಿದಿದ್ದೇವೆ. ಈಗ ಹಳ್ಯಾಳದ ಘಟನೆ ಅದನ್ನು ಎತ್ತಿತೋರಿಸಿದೆ.

ಹಿನ್ನೆಲೆ :

ಕಳೆದ 3-4 ವರ್ಷಗಳಿಂದಲೂ, ಹಳ್ಯಾಳ ತಾಲ್ಲೂಕಿನ ಹಲವಾರು ಹಳ್ಳಿಗಳ ರೈತರೆಲ್ಲ, ಒಕ್ಕಲತನಕ್ಕೆ ಯೋಗ್ಯವಾದ ಅಡವಿ ಭೂಮಿಯನ್ನು ತಮಗೆ ಕೊಡಬೇಕೆಂದು, ಫಾರೆಸ್ಟ್ ಅಧಿಕಾರಿಗಳಿಗೂ, ಸರಕಾರಕ್ಕೂ ಅರ್ಜಿಗಳನ್ನು ಸಲ್ಲಿಸುತ್ತಲೇ ಬಂದಿದ್ದಾರೆ. ಆದರೆ ಮೇಲಧಿಕಾರಿಗಳು ಇದರ ಕಡೆ ಗಮನ ಕೊಟ್ಟಿಲ್ಲ. ರೈತಸಂಘದ ಆದೇಶದ ಮೇರೆಗೆ ತಾ. 5 ರಂದು ಸಾತನೆ, ಜಾವಳ್ಳಿ, ಕೇರವಾಡ, ಕಂಚನಳ್ಳಿ, ಹವಗಿ, ಮೊದಲಾದ ಹಳ್ಳಿಗಳಲ್ಲಿ ಫಾರೆಸ್ಟ್ ಭೂಮಿಯ ಗಿಡಗಂಟಿ ಕಡಿದು ಭೂಮಿ ಹಸನು ಮಾಡುವ ಕಾರ್ಯಕ್ರಮದಂತೆ ರೈತರು ಕೆಲಸ ಮಾಡಿದರು. ಆದಿವಸ ಕಾಂ. ಸ್ಥಳೀಕರನ್ನೊಳಗೊಂಡು 73 ರೈತರನ್ನು ಬಂಧಿಸಲಾಯಿತು. ರೈತ ಮುಖಂಡ ಅಪ್ಪನ್ನಿ ಡಿ'ಸೋಜಾನನ್ನು ಬಂಧಿಸುವಾಗ ಮನಬಂದಂತೆ ಪೋಲೀಸರು ಅವರನ್ನು ಹೊಡೆದರು. ತಾ. 6ರಂದು ಇತರ ಹಳ್ಳಿಗಳಲ್ಲಿ ಇದೇ ರೀತಿ ಗಿಡಗಂಟಿ ಕಡಿದಾಗ 900 ಜನರನ್ನು ಬಂಧಿಸಿ ಹಳಿಯಾಳಕ್ಕೆ ತಂದು ಸಂಜೆ ಅವರನ್ನು ಬಿಟ್ಟುಬಿಡಲಾಯಿತು. ಇದನ್ನು ನೋಡಿ ಬಂಧಿತರ ಬಿಡುಗಡೆ, ಫಾರೆಸ್ಟ್ ಭೂಮಿಯ ಹಂಚಿಕೆ ಬೇಡಿಕೆಯನ್ನಿಟ್ಟು ತಾ. 7 ರಂದು ಹಳಿಯಾಳ ಬಂದ್ ಆಚರಿಸಬೇಕೆಂದು ನಿರ್ಣಯ ಮಾಡಿ ಬಂದ್ ಆಚರಿಸಲಾಯಿತು.

ಪೋಲೀಸ್ ದಬ್ಬಾಳಿಕೆ :

ತಾ. 7 ರಂದು 3000 ರೈತರು (ನೂರಾರು ಹೆಂಗಸರೂ ಸೇರಿ) ಶಾಂತ ರೀತಿಯಿಂದ 3 ಕಡೆಗಳಲ್ಲಿ ಮತಪ್ರದರ್ಶನ ನಡೆಸಿದರು. ಮಧ್ಯಾಹ್ನ 2-30ರ ತನಕ ಏನೂ ಘಟಿಸಲಿಲ್ಲ. 2-30ಕ್ಕೆ ಬೆಳಗಾವಿಯಿಂದ ರಿಸರ್ವ್ ಪೋಲೀಸರು ಬಂದ ಕೂಡಲೇ ಅಶ್ರುವಾಯು ಪ್ರಯೋಗಿಸಿ, ಲಾಠಿಚಾರ್ಜು ಮಾಡಿದರು. ಜನರು ಓಡುತ್ತಿರುವಾಗ ಊರುಬಿಟ್ಟು ಒಂದು ಫರ್ಲಾಂಗ್ ದೂರದ ಹೊಲದಲ್ಲಿ ಮತಪ್ರದರ್ಶಕರ ಮೇಲೆ 3 ಸುತ್ತು ಗೋಲಿಬಾರು ಮಾಡಿದರು. ತಗ್ಗಿನಳ್ಳಿ ಗ್ರಾಮದ 40 ವರ್ಷವಯಸ್ಸಿನ ಮಾರುತಿ ಗಣೇಶಪ್ಪ ಪವಾರ ಮೊದಲನೇ ಗೋಲಿ ತಲೆಗೆ ಬಡಿದು ಸ್ಥಳದಲ್ಲೇ ಅಸುನೀಗಿದ. 2ನೇ ಗೋಲಿ ಮತ್ತೊಬ್ಬನಿಗೆ ಬಡಿದಿದ್ದು ಆ ವ್ಯಕ್ತಿಯ ಪತ್ತೆಯಾಗಿಲ್ಲ. ಅದರಂತೆಯೇ 4 ಗಂಟೆಗೆ ಗುಂದದಿಂದ ಟ್ರಕ್ಕಿನಲ್ಲಿ ಹಮಾಲಿ ಕೆಲಸ ಮಾಡುವ ನಾರಾಯಣ ತೊರ್ಲೆಕರ ಎಂಬವನ ಪತ್ತೆಯಿಲ್ಲ. ಪೋಲೀಸರು ಇವನಿಗೆ ಚೆನ್ನಾಗಿ ಹೊಡೆದು ನಾಪತ್ತೆ ಮಾಡಿದ್ದಾರೆಂದು ಸುದ್ದಿಯಿದೆ. ಶಾಂತ ರೀತಿಯ ಮತಪ್ರದರ್ಶಕರ ಮೇಲೆ ಲಾಠಿಚಾರ್ಜು-ಗೋಲಿಬಾರ್ ನಡೆದ ನಂತರ ಪರಿಸ್ಥಿತಿ ಗಂಭೀರವಾಯಿತು. ಕಲ್ಲು ತೂರಾಟ ನಡೆದ ನಂತರ ಲಾಠಿ ಚಾರ್ಜು-ಗೋಲಿಬಾರ್ ಮಾಡಲಾಯಿತೆಂಬ ಪೋಲೀಸರ ವರದಿ ಶುದ್ಧ ಸುಳ್ಳು.

7 ರಂದು ಮುಂಜಾನೆ ಬಂದ್ ಶುರುವಾಗುವ ಮುಂಚೆಯೇ ಬಸಣ್ಣಪಟ್ಟೇಕರ ಮೊದಲಾದ ಹಲವಾರು ಕಾರ್ಯಕರ್ತರನ್ನು ಬಂಧಿಸಲಾಗಿತ್ತು. ಪವಾರ ಮತ್ತು ಮಾಳ್ಸೇಕರರನ್ನು ಬಂಧಿಸಬೇಕೆಂದು ಪೋಲೀಸರು ಪ್ರಯತ್ನಿಸಿದರು. ಜನರು ಅವರನ್ನು ಸಂರಕ್ಷಣೆ ಮಾಡುತ್ತಿದ್ದುದರಿಂದ ಅಶ್ರುವಾಯು-ಲಾಠಿಚಾರ್ಜು ಆಗುವಾಗ ಜನರು ಚದುರಲು ಪ್ರಾರಂಭಿಸಿದಾಗ ಇವರ ಬಂಧನವಾಯಿತು. ಪವಾರರನ್ನು ಪೋಲೀಸರು ಬಹಳ ಹೊಡೆದಿದ್ದಾರೆಂದು ತಿಳಿದು ಬಂದಿದೆ. ಒಟ್ಟು 125ಕ್ಕೂ ಹೆಚ್ಚು ಜನರನ್ನು ಕಾರವಾರ ಜೈಲಿನಲ್ಲಿಟ್ಟಿದ್ದಾರೆ. ದಿನಾಲೂ ಪೋಲೀಸ್ ವ್ಯಾನ್ ಹಳ್ಳಿಗಳಲ್ಲಿ ಸುತ್ತಾಡಿ ರೈತರನ್ನು ಬೆದರಿಸುತ್ತಿದ್ದಾರೆ. "ನಿಮಗೆ ಭೂಮಿಬೇಕೋ ಮಕ್ಕಳೇ" ಎಂದು ಹೇಳಿ ರೈತರಿಗೆ ಬೂಟುಕಾಲಿನಿಂದ ಒದೆಯುತ್ತಿದ್ದಾರೆ. ಹಳಿಯಾಳದಲ್ಲಿ ರೈತಸಂಘ ಬಲಿಷ್ಠವಾಗಿರುವಲ್ಲಿ ಕೂಡ ಮನೆಹೊಕ್ಕು ದಬ್ಬಾಳಿಕೆ ಮಾಡುತ್ತಿದ್ದಾರೆ. ನೂರಾರು ಜನರಿಗೆ ಲಾಠಿಚಾರ್ಜಿನಿಂದ ಗಾಯವಾಗಿದೆ. ಕೆಲವರು ಆಸ್ಪತ್ರೆಯಲ್ಲಿದ್ದಾರೆ. ಕೆಲವರು ಪೋಲೀಸರಿಗೆ ಅಂಜಿ ಆಸ್ಪತ್ರೆಗೆ ಹೋಗಿಲ್ಲ.

ತಾ. 9 ರಂದು ಪೋಲೀಸರು ಹಳಿಯಾಳದಲ್ಲಿ 80 ವರ್ಷದ ಮುದುಕರಾದ ಹನುಮಂತಪ್ಪ ಬೊಬಾಟಿಯವರನ್ನೂ, ಯಶವಂತ ಬೊಬಾಟಿಯವರನ್ನೂ ಬಂಧಿಸಿದ್ದರು. ಯಶವಂತನಿಗೆ ಬೂಟುಕಾಲಿನಿಂದ ಒದ್ದು ಮನಬಂದಂತೆ ಬೈದು, ಗೋಲಿಬಾರದ ಸ್ಥಳಕ್ಕೆ ಕರೆದುಕೊಂಡು ಹೋಗಿ, ನಿನ್ನನ್ನೂ ಕೊಲ್ಲುತ್ತೇವೆಂದು ಹೇಳಿ ಬೆದರಿಸಿದ್ದರು. ಅಷ್ಟರಲ್ಲಿ ಸಿರ್ಸಿಯ ಧಾರೇಶ್ವರ ವಕೀಲರು ಅಕಸ್ಮಾತ್ ಇದನ್ನು ನೋಡಿ ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದ ನಂತರ ಇವರಿಬ್ಬರ ಬಿಡುಗಡೆಯಾಯಿತು. ಪೋಲೀಸರ ದಬ್ಬಾಳಿಕೆ ಬಂಧನ ನಿತ್ಯವೂ ನಡೆದೇ ಇದೆ.

ಪೋಲೀಸರ ಅಪಪ್ರಚಾರ :

ಒಂದೆರಡು ತಿಂಗಳಿಂದಲೂ ಭೂಮಿ ಆಕ್ರಮಣ ನಡೆದಿದೆಂದೂ, ದೊಡ್ಡ ಮರಗಳನ್ನು ಕಡಿದಿದ್ದಾರೆಂದೂ ಪೋಲೀಸರ ವರದಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಶುದ್ಧ ಸುಳ್ಳು. ತಾ. 5 ರಿಂದ ಮಾತ್ರ ಈ ಚಳುವಳಿ ಪ್ರಾರಂಭವಾಗಿದೆ. ದೊಡ್ಡ ಮರ ಕಡಿಯಬಾರದೆಂಬ ಆದೇಶ ಕೊಡಲಾಗಿದೆ. ಗಿಡ-ಗಂಟಿಗಳನ್ನಷ್ಟೇ ಕಡಿದು ಭೂಮಿಯನ್ನು ಸ್ವಚ್ಛ ಮಾಡಲಾಗಿದೆ. ತಮ್ಮ ಹೀನಾಯ ಕೃತಿಯ ರಕ್ಷಣೆಗಾಗಿ ಪೋಲೀಸರು ಈ ರೀತಿ ಅಪಪ್ರಚಾರ ಮಾಡುತ್ತಿದ್ದಾರೆ.

ಇದೇ ಸಮಯದಲ್ಲಿ ದೊಡ್ಡ ಸಾವುಕಾರರು, ಧನಿಗಳು ಸರಕಾರಿ ಭೂಮಿಯನ್ನು ಅತಿಕ್ರಮಣ ಮಾಡಿ ಲಾಭಗಳಿಸುತ್ತಿರುವುದರ ಕುರಿತು ಪೋಲೀಸರಾಗಲೀ, ಫಾರೆಸ್ಟ್ ಅಧಿಕಾರಿಗಳಾಗಲೀ ಚಕಾರ ಶಬ್ದ ಎತ್ತುತ್ತಿಲ್ಲ. ಅಂಬೋಡಗಾ ಕೆರೆಯ ಸುತ್ತ 1200 ಎಕರೆ ಉತ್ತಮ ಭೂಮಿಯಿದ್ದು, ಸಿರಿವಂತ ಜನರು ಅಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಅವರು ಆ ಭೂಮಿಯನ್ನು ಅತಿಕ್ರಮಣ ಮಾಡಿದ್ದರೂ ಸರಕಾರ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಆದರೆ ಭೂಮಿಯಿಲ್ಲದ ರೈತ ಸ್ವಂತ ದುಡಿಮೆಗಾಗಿ ಗಿಡ-ಗಂಟಿ ಕಡಿದರೆ ಅಂಥವರನ್ನು ಹಿಡಿದು ಜೈಲಿಗೆ ಹಾಕುತ್ತದೆ ಈ ಇಂದಿರಾ ಕಾಂಗ್ರೆಸ್ ಸರಕಾರ, ಬಡವರ ಮೇಲೆ ಗೋಲಿಬಾರ್ ಮಾಡಿ ಅವರನ್ನು ಕೊಲ್ಲುತ್ತದೆ.

ಜನರ ಧೈರ್ಯ :

ಪೋಲೀಸರ ದಬ್ಬಾಳಿಕೆ ದಿನಾ ಮುಂದುವರಿಯುತ್ತಿದ್ದರೂ ಕೂಡ ಜನರು ಅದನ್ನೆದುರಿಸುವ ಧೈರ್ಯದಲ್ಲಿದ್ದಾರೆ. ಇಂದಿರಾ ಕಾಂಗ್ರೆಸ್ಸಿನವರೂ, ಸಾವುಕಾರ ಜನರೂ ಗೋಲಿಬಾರಿನ-ದಬ್ಬಾಳಿಕೆಯ ಉಪಯೋಗ ಮಾಡಿಕೊಂಡು ಜನರಲ್ಲಿ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಾರ್ಟಿ-ರೈತ ಸಂಘದ ಕುರಿತು ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ಭೂಮಿಗಾಗಿ, ಜೀವಂತ ಉಳಿಯುವ ಸಲುವಾಗಿ ಹೋರಾಡುವ ರೈತ ಇಂಥ ಅಪಪ್ರಚಾರಕ್ಕೆ ಬಲಿಯಾಗುತ್ತಿಲ್ಲ. ಎಷ್ಟೋ ಹೆಂಗಸರೂ ಕೂಡ ಧೈರ್ಯದಿಂದ ಮಾತಾಡುತ್ತಿರುವುದು ಶುಭಚಿನ್ಹೆ. ಭೂಮಿಗಾಗಿ ಹೋರಾಡುವ ರೈತರ ಬೇಡಿಕೆಯನ್ನು ಸರಕಾರ ಕೂಡಲೇ ಒಪ್ಪಿಕೊಂಡು ಈ ಸಮಸ್ಯೆ ಬಗೆಹರಿಸಲು ಮುಂದೆ ಬರಬೇಕು. ಇಲ್ಲವಾದರೆ ರೈತರ ಸಂಘಟಿತ ಹೋರಾಟವನ್ನೆದುರಿಸಬೇಕಾದೀತು. ಹಳಿಯಾಳದ ದುಡಿಯುವ ರೈತರ ಕೂಗಿದು. ಸರಕಾರ ಇದನ್ನು ಗಮನಿಸಲಿ !

ಬ್ರಿಟೀಷರ ದಬ್ಬಾಳಿಕೆಯಾಗಲೀ, ಆಳುವ ಕಾಂಗ್ರೆಸ್ಸಿನ ಅತ್ಯಾಚಾರವಾಗಲೀ ಜನರ ಹೋರಾಟದ ಶಕ್ತಿಯನ್ನು ಕುಗ್ಗಿಸಿಲ್ಲ. ಅವರಲ್ಲಿ ಹೊಸ ಸ್ಫೂರ್ತಿಯನ್ನು ತುಂಬಿ ಹೋರಾಟವನ್ನು ಮುಂದುವರಿಸಲು ಅಣಿಮಾಡಿಕೊಟ್ಟಿರುವುದನ್ನು ರಾಜ್ಯ ಸರಕಾರ ನೆನಪಿಟ್ಟುಕೊಳ್ಳುವುದು ಅತ್ಯಗತ್ಯ. ●

ಶ್ರದ್ಧಾಂಜಲಿ

ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸದಸ್ಯರಾದ ಎನ್.ಕೆ. ಉಪಾಧ್ಯಾಯ, ಎಸ್.ಎಫ್.ಐ.ಯ ಜಿ. ನಾಗರಾಜ, ರೈತಸಂಘದ ಬಾಲಸಿಂಗ ಅವರು ತಗ್ಗಿನಲ್ಲಿ ಗ್ರಾಮದಲ್ಲಿರುವ ದಿವಂಗತ ಮಾರುತಿ ಪವಾರಿನ ಮನೆಗೆ ಹೋಗಿ ಅವರ ಪತ್ನಿ-ಮಕ್ಕಳು ಸಂಬಂಧಿಕರಿಗೆಲ್ಲ ಭೆಟ್ಟಿಯಾಗಿ, ಪಕ್ಷ, ಎಸ್. ಎಫ್. ಐ, ರೈತಸಂಘದ ಪರವಾಗಿ ಹಳಿಯಾಳದಲ್ಲಿ ಪೋಲೀಸರ ಗೋಲಿಬಾರಿಗೆ ತುತ್ತಾಗಿ ಅಸುನೀಗಿದ ಮಾರುತಿ ಪವಾರನಿಗೆ ಶ್ರದ್ಧಾಂಜಲಿಯನ್ನರ್ಪಿಸಿ, ದುಃಖಪ್ರದರ್ಶನ ಮಾಡಿದರು.

ಜೈಲಿನಲ್ಲಿ ನಿರ್ಣಯ

ಕಾರವಾರ ಜಿಲ್ಲಾ ಜೈಲಿನಲ್ಲಿ ದಿನಾಂಕ 9-6-79 ರಂದು ಕಾಂ. ಎನ್. ಜಿ. ಮ್ಹಾಳಸೇಕರ ಇವರ ಅಧ್ಯಕ್ಷತೆಯಲ್ಲಿ ಸೇರಿದ ರೈತರ ಈ ಸಭೆಯು ಈ ಕೆಳಗಿನ ಠರಾವನ್ನು ಸರ್ವಾನುಮತದಿಂದ ಅಂಗೀಕರಿಸಿದೆ.

ಕಾರವಾರ ಜಿಲ್ಲಾ ಜೈಲು ಬಂದಿಗಳ ಈ ಸಭೆಯು ದಿನಾಂಕ 7-6-79ರಂದು ಪೋಲೀಸರು ಹಳಿಯಾಳದಲ್ಲಿ ಬಡರೈತ ಕೂಲಿಕಾರರ ಮೇಲೆ ನಡೆಸಿದ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸುತ್ತದೆ. ಬಡರೈತ-ಕೂಲಿಕಾರರಿಗೆ ಅರಣ್ಯ ಭೂಮಿ ಹಂಚುವ ಆಶ್ವಾಸನೆಯಿತ್ತು ಅಧಿಕಾರಕ್ಕೆ ಬಂದ ಇಂದಿರಾ ಕಾಂಗ್ರೆಸ್ ಸರಕಾರವು ಇಂದು ನಿರ್ದೋಷಿಗಳಾದ ಈ ಬಡಪಾಯಿಗಳ ಮೇಲೆ ಸಶಸ್ತ್ರ ಪೋಲೀಸ್ ಪಡೆಯನ್ನು ಛೂಬಿಟ್ಟು ಹಳಿಯಾಳದ ಇತಿಹಾಸದಲ್ಲಿ ಹಿಂದೆಂದೂ ಕಂಡು ಕಾಣದ ದಬ್ಬಾಳಿಕೆಯನ್ನು ನಡೆಸಿದೆ. ಯತಾರ್ಥವಾಗಿ ಸರಕಾರವು ಹಳ್ಳಿಯ ಬಡವರ ಮೇಲೆ ಯುದ್ಧವನ್ನು ಸಾರಿದೆ ಎಂದರೆ ತಪ್ಪಾಗಲಾರದು.

ದಿನಾಂಕ 7-6-79ರಂದು ನಡೆದ ಪೋಲೀಸ್ ಗೋಲಿಬಾರಿನಲ್ಲಿ ಮೃತಪಟ್ಟ ರೈತ ಹುತಾತ್ಮ ಶ್ರೀ ಮಾರುತಿ ಗಣೇಶಪ್ಪ ಪವಾರ ತೆಗನೊಳ್ಳಿ ಇವರಿಗೆ ಈ ಸಭೆಯು ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ಮತ್ತು ಇವರ ಗೌರವಾರ್ಥ ಕೆಂಪು ಸಲಾಮಿಯನ್ನು ಕೊಡುತ್ತಿದೆ. ಮೃತರ ಕುಟುಂಬಕ್ಕೆ ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.

ನಿರ್ಗತಿಕರಾದ ಹುತಾತ್ಮ ಮಾರುತಿ ಪವಾರ ಇವರ ಕುಟುಂಬಕ್ಕೂ ಗಾಯಗೊಂಡ ಇತರರಿಗೂ ತಕ್ಷಣ ಯೋಗ್ಯ ಪರಿಹಾರ ಕೊಡಬೇಕೆಂದು ಸರಕಾರಕ್ಕೆ ಒತ್ತಾಯಿಸುತ್ತದೆ.

ನಿಸ್ಸಹಾಯಕರಾದ ಹಳಿಯಾಳದ ಬಡರೈತ-ಕೂಲಿಕಾರ ಮತ್ತು ಇತರ ಜನಸಾಮಾನ್ಯರ ಮೇಲೆ ದಿನಾಂಕ 7-6-79ರಂದು ನಡೆಸಿದ ಪೋಲೀಸ್ ದೌಜನ್ಯ ಮತ್ತು ಗೋಲಿಬಾರದ ಯೋಗ್ಯ ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಮತ್ತು ತಕ್ಷಣ ಬಂಧಿತರನ್ನು ಬಿಡುಗಡೆ ಮಾಡಿ ಅವರ ಮೇಲೆ ಹಾಕಲಾದ ಸುಳ್ಳು ಮೊಕದ್ದಮೆಗಳನ್ನು ಹಿಂದೆಗೆದುಕೊಳ್ಳಬೇಕೆಂದು ಈ ಸಭೆಯು ಸರಕಾರಕ್ಕೆ ಒತ್ತಾಯಿಸುತ್ತದೆ.

ನಮ್ಮ ಚಳುವಳಿಯ ಮುಖ್ಯ ಬೇಡಿಕೆಯಾದ ಅರಣ್ಯ ಭೂಮಿಯನ್ನು ಬಡರೈತ-ಕೂಲಿಕಾರರಿಗೆ ಕೂಡಲೇ ಪುಕ್ಕಟೆಯಾಗಿ ಹಂಚಬೇಕೆಂದು ಈ ಸಭೆಯು ಒತ್ತಾಯಿಸುತ್ತದೆ. ●

ಮತ್ತೆ ಬೆಲೆ ಏರಿಕೆ, ಹಣದುಬ್ಬರ !

—ಆರ್. ಚಂದ್ರ

ಆರ್ಥಿಕ ಸಮೀಕ್ಷೆ:

ರೋಗಗ್ರಸ್ಥ ಆರ್ಥಿಕ ವ್ಯವಸ್ಥೆ:

ನಮ್ಮ ದೇಶದಲ್ಲಿ ಸ್ವಾತಂತ್ರ್ಯಾನಂತರ ಅನುಸರಿಸಿಕೊಂಡು ಬಂದಿರುವ ಬಂಡವಾಳಶಾಹಿ ಆರ್ಥಿಕ ಪದ್ಧತಿಯು ರೋಗಗ್ರಸ್ಥವಾಗಿದೆ. ಬಡತನ, ನಿರುದ್ಯೋಗ, ಅಸಮಾನತೆ, ಬೆಲೆ ಏರಿಕೆ, ಹಣದುಬ್ಬರ, ನಿರಕ್ಷರತೆ, ದುರ್ದೆಸೆಯ ಜೀವನ ಇತ್ಯಾದಿಗಳು ರೋಗಗ್ರಸ್ಥ ಆರ್ಥಿಕ ವ್ಯವಸ್ಥೆಯಲ್ಲಿ ನಿರಂತರವಾಗಿರುವ ಲಕ್ಷಣಗಳು. ರೋಗಗ್ರಸ್ಥ ಹಾಗೂ ಸಾವಿಗೆ ಸಮೀಪಿಸುತ್ತಿರುವವನ ಆರೋಗ್ಯದ ಕುರಿತು ಆಗಾಗ ವಿಶೇಷ ಪ್ರಕಟಣೆ ಮಾಡುವಂತೆ, "ಈಗ ಬೆಲೆಗಳು ಸ್ವಲ್ಪ ಇಳಿಮುಖವಾಗಿವೆ, ಉದ್ಯೋಗ ಉತ್ಪಾದನೆಗಳಲ್ಲಿ ಹೆಚ್ಚುವರಿಯಾಗಿವೆ, ಹಣದುಬ್ಬರ ನಿಂತಿದೆ" ಎನ್ನುವಷ್ಟರಲ್ಲಿಯೇ, "ಮತ್ತೆ ಬೆಲೆಗಳು ಏರುತ್ತಿವೆ, ಹಣದುಬ್ಬರ ಅಬ್ಬರಿಸುತ್ತಿದೆ, ಬಡತನ ಹೆಚ್ಚುತ್ತಿದೆ" ಎಂಬ ಆಘಾತಕ ವರದಿಗಳು ಸಿಗುತ್ತಿವೆ.

ಬಂಡವಾಳಶಾಹಿ ಭೂಮಾಲಕ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಯಾವ ಸಮಸ್ಯೆಗೂ ಶಾಶ್ವತವಾದ ಪರಿಹಾರ ಸಿಗಲಾರದು. ಎಲ್ಲಾ ಸಮಸ್ಯೆಗಳಿಗೂ ಆಳುವ ವರ್ಗದ ರಾಜಕೀಯ ಧುರೀಣರೂ, ಆಡಳಿತಾಧಿಕಾರಿಗಳೂ, ಅರ್ಥಶಾಸ್ತ್ರಜ್ಞರೇ ಮೊದಲಾದ ತಜ್ಞರೂ ತಾತ್ಕಾಲಿಕ ಪರಿಹಾರಗಳನ್ನು ಕಂಡುಹಿಡಿಯುವುದರಲ್ಲಿಯೇ ತಲ್ಲೀನರಾಗುವರು. ಅವರಿಗೆ ಸಮಸ್ಯೆಗಳು ಶಾಶ್ವತವಾಗಿ ಪರಿಹಾರವಾಗಬೇಕಾಗಿಲ್ಲ. ಅವರ ಶಾಶ್ವತ ಹಿತಾಸಕ್ತಿಗಳು ಲಾಭ, ಆದಾಯ ಮತ್ತು ಸಂಪತ್ತುಗಳಿಗೆ ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವರ ಪ್ರತಿಷ್ಠೆ ಮತ್ತು ಪ್ರಭುತ್ವಗಳನ್ನು ಉಳಿಸಿಕೊಳ್ಳುವುದಾಗಿದೆ. ಆದುದರಿಂದ, ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಗರ್ಭದಿಂದ ಹೊರ ಹೊಮ್ಮುವ ಸಮಸ್ಯೆಗಳಿಂದಲೂ ಮತ್ತು ಅವುಗಳ ಪರಿಹಾರಕ್ಕಾಗಿ ಕೈಕೊಳ್ಳುವ ತಾತ್ಕಾಲಿಕ ಹಾಗೂ ತುರ್ತುಕ್ರಮಗಳಿಂದಲೂ ಜನಸಾಮಾನ್ಯರೇ, ಮುಖ್ಯವಾಗಿ ದುಡಿಯುವ ಜನತೇ ಮತ್ತಷ್ಟು ಕಷ್ಟಕಾರ್ಪಣ್ಯಗಳಿಗೂ ಶೋಷಣೆಗೂ ಒಳಗಾಗುವರು. ಈ ಹಿನ್ನೆಲೆಯಲ್ಲಿ ಮತ್ತೆ ತಲೆಎತ್ತಿರುವ ಬೆಲೆಏರಿಕೆ ಮತ್ತು ಹಣದುಬ್ಬರದ ಸಮಸ್ಯೆಗಳ ಸಂಕ್ಷಿಪ್ತ ಸಮೀಕ್ಷೆ ನಡೆಸುವಾ.

ಮುಂಗಡಪತ್ರ ಮತ್ತು ಬೆಲೆಏರಿಕೆ:

1979-80ರ ಕೇಂದ್ರ ಮುಂಗಡಪತ್ರದಲ್ಲಿ ದಿನಬಳಕೆಯ ಆವಶ್ಯಕ ವಸ್ತುಗಳಿಗೆಲ್ಲಾ ಭಾರೀ ಪ್ರಮಾಣದ ತೆರಿಗೆ ಹೇರಿದಾಗಲೇ ಬೆಲೆಗಳು ಇನ್ನು ಮುಂದೆ ವಿಪರೀತವಾಗಿ ಏರುವುವು ಎಂದು ಭಯಪಡಲಾಗಿತ್ತು. ಆದರೆ, ಸಂಬಂಧಪಟ್ಟ ಖಾತೆಯ ವಕ್ತಾರರು ಮುಂಗಡಪತ್ರದಲ್ಲಿನ ತೆರಿಗೆಗಳಿಂದಾಗಿ ಪ್ರಸಕ್ತ ಆರ್ಥಿಕ ವರುಷವಿಡೀ ಶೇ. 1 ಕ್ಕಿಂತ ಹೆಚ್ಚು ಬೆಲೆಏರಿಕೆ ಆಗಲಾರದೆಂದು ಘಂಟಾಘೋಷವಾಗಿ ಹೇಳಿದರು. ಆದರೆ, ಮುಂಗಡಪತ್ರ ಪ್ರಕಟಣೆಯಾದ ಮೊದಲವಾರದಲ್ಲಿಯೇ ಸಗಟು ವ್ಯಾಪಾರ ಬೆಲೆಗಳ ಸೂಚ್ಯಂಕ (1970-71 =100) ದಲ್ಲಿ ಶೇ. 1.7 ರಷ್ಟು ಹೆಚ್ಚಾಯಿತು. ಎರಡನೇ ಮತ್ತು ಮೂರನೇ ವಾರಗಳಲ್ಲಿ ಅನುಕ್ರಮವಾಗಿ ಈ ಬೆಲೆಗಳ ಸೂಚ್ಯಂಕದಲ್ಲಿ ಪುನಃ ಶೇ. 0.7ರಷ್ಟು ಮತ್ತು ಶೇ. 0.3 ರಷ್ಟು ಹೆಚ್ಚಾಯಿತು. ಒಟ್ಟು ಮೂರು ವಾರಗಳಲ್ಲಿ ಶೇ. 2.7 ರಷ್ಟು ಮತ್ತು ಆರು ವಾರಗಳಲ್ಲಿ ಶೇ. 6ರಷ್ಟು ಈ ಬೆಲೆಗಳ ಸೂಚ್ಯಂಕದಲ್ಲಿ ಹೆಚ್ಚಿರುವುದು ವರದಿಯಾಗಿದ್ದು, 1973-74ರ ಹಣದುಬ್ಬರದ ವಿಷವರ್ತುಲದ ಗಂಭೀರ ಪರಿಸ್ಥಿತಿಯ ನೆನಪಾಗುತ್ತಿದೆ. ಬೆಲೆಗಳು ಹೀಗೆಯೇ ಏರುತ್ತಿದ್ದರೆ, ಈ ಆರ್ಥಿಕ ವರುಷಾಂತ್ಯದಲ್ಲಿ ಶೇ. 25 ರಿಂದ 35ರಷ್ಟು ಗತಿಯ ಹಣದುಬ್ಬರಕ್ಕೆ ಕಾರಣವಾದೀತೆಂದು ಅಂದಾಜು ಮಾಡಲಾಗಿದೆ.

ಸಗಟು ವ್ಯಾಪಾರದ ಬೆಲೆಗಳ ಸೂಚ್ಯಂಕವು ಫೆಬ್ರವರಿ 21,-'71ರಲ್ಲಿ 184.4 ಆಗಿದ್ದು ಏಪ್ರಿಲ್ 21, '79ರಲ್ಲಿ 194.1ಕ್ಕೆ ಏರಿದೆ. ಇದು ಏಪ್ರಿಲ್ 21, '78ರ ಸೂಚ್ಯಂಕಕ್ಕಿಂತ ಶೇ. 6.4 ರಷ್ಟು ಹೆಚ್ಚಾಗಿದೆ. ಮಾರ್ಚ್ '79ರ ಸೂಚ್ಯಂಕವು ಮಾರ್ಚ್ '78ರ ಸೂಚ್ಯಂಕಕ್ಕಿಂತ ಶೇ. 7.5ರಷ್ಟು ಹೆಚ್ಚಾಗಿದೆ. ಇದರಿಂದ ಒಂದು ವಿಷಯ ಸ್ಪಷ್ಟವಾಗುವುದು: ಸಧ್ಯದ ಬೆಲೆ ಏರಿಕೆಯು ಹೆಚ್ಚು ವ್ಯವಹಾರ ಚಟುವಟಿಕೆಯ ತಿಂಗಳಾದ ಮಾರ್ಚ್‌ನಲ್ಲಿ ಸರ್ವಸಾಮಾನ್ಯವಾಗಿ ಸಂಭವಿಸುವುದೆಂದು ಅಲಕ್ಷಿಸುವಂತಿಲ್ಲ. ಹಾಗೆಯೇ, ಬೆಲೆಏರಿಕೆಗೆ ಕೇಂದ್ರ ಮತ್ತು ರಾಜ್ಯ ಮುಂಗಡಪತ್ರಗಳ ತೆರಿಗೆ ಹೇರಿಕೆಯೊಂದೇ ಕಾರಣ ಎಂದೂ ಹೇಳುವಂತಿಲ್ಲ. ಸಧ್ಯದ ಬೆಲೆ ಏರಿಕೆಗೆ ಇನ್ನಷ್ಟು ಮೂಲಭೂತವಾದ ಕಾರಣಗಳಿವೆ. ಮುಂಗಡಪತ್ರದ ತೆರಿಗೆಗಳೂ ಮತ್ತಿತರ ಪ್ರಸ್ತಾಪಗಳೂ ಬೆಲೆ ಏರಿಕೆಯ, ಹಣದುಬ್ಬರದ ಸುಪ್ತ ಶಕ್ತಿಗಳನ್ನು ಪ್ರಚೋದಿಸಿ ಬಡಿದೆಬ್ಬಿಸಿದವು.

ಹಣದ ಚಲಾವಣೆ, ಉದ್ಯೋಗ ಮತ್ತು ಉತ್ಪಾದನೆ:

ದೇಶದಲ್ಲಿ ಬ್ಯಾಂಕು ಠೇವಣಿಗಳೂ ಸೇರಿ ಒಟ್ಟು ಹಣದ ಚಲಾವಣೆಯ ಹೆಚ್ಚಳಕ್ಕನುಗುಣವಾಗಿ ಉದ್ಯೋಗ ಮತ್ತು ಉತ್ಪಾದನೆಗಳು ಹೆಚ್ಚದಿರುವುದೇ ಹಣದುಬ್ಬರದ ಹಿನ್ನೆಲೆ. 1978-79 ರಲ್ಲಿ ಒಟ್ಟು ಹಣದ ಚಲಾವಣೆಯು ರೂ. 6730 ಕೋಟಿಗಳಷ್ಟು ಹೆಚ್ಚಿತು. ಈ ಹೆಚ್ಚಳವು 1977-78ಕ್ಕಿಂತ ರೂ. 1602 ಕೋಟಿ ಮಿಗಿಲಾಗಿದೆ, ಒಟ್ಟು ಹಣದ ಚಲಾವಣೆಯ ಹೆಚ್ಚಳವು 1978-79ರಲ್ಲಿ ಶೇ. 20.5 ರಷ್ಟಾಗಿದ್ದು 1977-78 ಮತ್ತು 1976-77ರಲ್ಲಿ ಅನುಕ್ರಮವಾಗಿ ಶೇ. 18.5 ಮತ್ತು 23.5 ರಷ್ಟಾಗಿತ್ತು. ಕೆಲವು ವರುಷಗಳ ಹಿಂದೆ ಶೇ. 15 ರಿಂದ 20ರಷ್ಟು ಹಣದ ಚಲಾವಣೆಯಲ್ಲಿ ಹೆಚ್ಚಳವನ್ನು ಊಹಿಸಲೂ ಸಾಧ್ಯವಿರಲಿಲ್ಲ. ಒಟ್ಟು ಹಣದ ಚಲಾವಣೆಯ ಹೆಚ್ಚಳವು 1. ಸರಕಾರವು ಪ್ರತಿ ವರುಷವೂ ಕೊರತೆ ಹಣ ಸೃಷ್ಟಿ ಮಾಡುವುದರಿಂದಲೂ, 2. ವಾಣಿಜ್ಯ ಬ್ಯಾಂಕುಗಳು ತಮ್ಮ ಠೇವಣಿಗಳ ಆಧಾರದ ಮೇಲೆ ಸಾಲ ನೀಡುವುದರಿಂದಲೂ ನಡೆಯುವುದು. ಈ ವರುಷದ ಮುಂಗಡಪತ್ರದಲ್ಲಿ ರೂ. 1335 ರಷ್ಟು ಕೊರತೆ ಹಣ ಸೃಷ್ಟಿಮಾಡಲು ನಿಶ್ಚೈಸಲಾಗಿದೆ. ಆರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ (1978-83) ಒಟ್ಟು ರೂ. 2200 ಕೋಟಿ ಕೊರತೆ ಹಣ ಸೃಷ್ಟಿಮಾಡುವುದೆಂದು ನಿರ್ಧರಿಸಲಾಗಿದ್ದರೂ, ಯೋಜನೆಯ ಮೊದಲ ಎರಡು ವರುಷಗಳಲ್ಲಿಯೇ ಈ ಮಿತಿಯು ಮೀರುವುದು! 1978-79ರ ಉತ್ತರಾರ್ಧದಲ್ಲಿ ಬ್ಯಾಂಕುಗಳು ನೀಡಿದ ಸಾಲದ ಮೊತ್ತವು ರಿಸರ್ವ್ ಬ್ಯಾಂಕ್ ನಿಗದಿ ಮಾಡಿದ ಮೊತ್ತಕ್ಕಿಂತ ಎರಡುಪಾಲು ಹೆಚ್ಚಾಯಿತು! ಅರ್ಥಾತ್, ಯೋಜನಾ ಆಯೋಗಕ್ಕೆ ಸರಕಾರ ಸೃಷ್ಟಿಸುವ ಹಣದ ಚಲಾವಣೆಯ ಮೇಲೆ ಹತೋಟಿಯಿಲ್ಲ. ರಿಸರ್ವ್ ಬ್ಯಾಂಕಿಗೆ ವಾಣಿಜ್ಯಬ್ಯಾಂಕುಗಳು ನೀಡುವ ಸಾಲಗಳ ಮೇಲೆ ನಿಯಂತ್ರಣವಿಲ್ಲ. ಹೋಗಲಿ, ಭಾರೀ ಪ್ರಮಾಣದಲ್ಲಿ ಹೆಚ್ಚುತ್ತಿರುವ ಹಣದ ಚಲಾವಣೆಗನುಗುಣವಾಗಿ ಉದ್ಯೋಗ ಮತ್ತು ಉತ್ಪಾದನೆ ಆಗುತ್ತಿದೆಯೋ?

ಮುಂಬಯಿಯ ಇಕನಾಮಿಕ್ಸ್ & ಪೊಲಿಟಿಕಲ್ ವೀಕ್ಲಿ (5-5-79)ಯ ಒಂದು ವಿಶೇಷ ಸಮೀಕ್ಷೆಯಂತೆ, ಇತ್ತೀಚಿನ ಮೂರು ವರುಷಗಳಲ್ಲಿ ಒಟ್ಟು ಹಣದ ಚಲಾವಣೆಯ ಹೆಚ್ಚಳಕ್ಕನುಗುಣವಾಗಿ ಬಂಡವಾಳ ನಿರ್ಮಾಣ (capital formation)ವಾಗಲೀ ಬಂಡವಾಳ ಹೂಡಿಕೆ (investment)ಯಾಗಲೀ ಗಣನೀಯವಾಗಿ ಹೆಚ್ಚಾಗಲಿಲ್ಲ. ಒಟ್ಟು ಹಣದ ಚಲಾವಣೆಯು ಈ ಮೂರು ವರುಷಗಳಲ್ಲಿ ಶೇ. 76 ರಷ್ಟು ಹೆಚ್ಚಿದ್ದರೂ, ದೇಶದ ಕೃಷಿ ಉತ್ಪಾದನೆ, ಕೈಗಾರಿಕಾ ಉತ್ಪಾದನೆ ಮತ್ತು ರಾಷ್ಟ್ರೀಯ ಒಟ್ಟು ಉತ್ಪಾದನೆ ಅನುಕ್ರಮವಾಗಿ ಕೇವಲ ಶೇ. 9, ಶೇ. 22 ಮತ್ತು ಶೇ. 14ರಷ್ಟು ಹೆಚ್ಚಾಗಿರುವುದನ್ನು ಈ ಸಮೀಕ್ಷೆಯು ನಮ್ಮ ಗಮನಕ್ಕೆ ತರುತ್ತದೆ. ಅದೇ ಸಮೀಕ್ಷೆಯಂತೆ, ದೇಶದಲ್ಲಿನ ನಿರುದ್ಯೋಗಸ್ಥರ ಸಂಖ್ಯೆಯು 1975 ರಿಂದ ಅಕ್ಟೋಬರ್ 1978ರಲ್ಲಿ 9.33 ಮಿಲಿಯದಿಂದ 12.33 ಮಿಲಿಯಕ್ಕೇರಿರುವುದನ್ನು ತಿಳಿಸಿದೆ. ಸಂಘಟಿತ ಕ್ಷೇತ್ರದಲ್ಲಿ ಈ ಮೂರು ವರುಷಗಳಲ್ಲಿ ಕೇವಲ ಶೇ. 2.7, ಶೇ. 3.4 ಮತ್ತು ಶೇ. 3ರಷ್ಟು ಉದ್ಯೋಗಾವಕಾಶಗಳು ಹೆಚ್ಚಿವೆ. ಹಣದ ಚಲಾವಣೆಯ ಹೆಚ್ಚಳಕ್ಕನುಗುಣವಾಗಿ ಉತ್ಪಾದನೆ ಹೆಚ್ಚುತ್ತಿಲ್ಲ. ಉತ್ಪಾದನೆಯ ಹೆಚ್ಚಳಕ್ಕನುಗುಣವಾಗಿ ಉದ್ಯೋಗಾವಕಾಶಗಳು ಹೆಚ್ಚುತ್ತಿಲ್ಲ. ಇದು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಮೂಲಭೂತವಾದ ವೈರುಧ್ಯ.

ಮಿತಿಮೀರಿದ ಸಾರ್ವಜನಿಕ ವೆಚ್ಚ:

ಹಾಗಾದರೆ, ಹೆಚ್ಚುತ್ತಿರುವ ಒಟ್ಟು ಹಣದ ಚಲಾವಣೆ ಏನಾಗುತ್ತಿದೆ? ಪೋಲಾಗುತ್ತಿದೆ! ಸರಕಾರದ ಸಾರ್ವಜನಿಕ ವೆಚ್ಚವು ಪ್ರತಿ ವರುಷವೂ ಅನುತ್ಪಾದಿತ ಹಾಗೂ ಅನಭಿವೃದ್ಧಿ ವಿಷಯಗಳಿಗೇ ಹೆಚ್ಚು ಹೆಚ್ಚು ಮೀಸಲಾಗುತ್ತಿದೆ. ಉದಾಹರಣೆಗೆ ಆಹಾರಧಾನ್ಯಗಳ ಖರೀದಿಗೆ, ರಸಗೊಬ್ಬರಗಳ ವಿತರಣೆಗೆ, ರಫ್ತು ವ್ಯಾಪಾರಕ್ಕೆ, ಇತ್ಯಾದಿ ವಿಷಯಗಳಿಗೆ ಪ್ರತಿ ವರುಷ ರೂ. 1000 ಕೋಟಿಗಳಿಗಿಂತಲೂ ಹೆಚ್ಚು ಸಹಾಯಧನ (subsidy) ನೀಡಲಾಗುತ್ತಿದೆ. ರಸಗೊಬ್ಬರದ ವಿತರಣೆ ಒಂದಕ್ಕೇ ವರ್ಷಕ್ಕೆ ರೂ. 450 ಕೋಟಿಗಳಷ್ಟು ಸಹಾಯಧನ ನೀಡಲಾಗುತ್ತಿದೆ. ಇದರ ಪ್ರಯೋಜನ ಗ್ರಾಹಕರಿಗಾಗಲೀ, ಸಣ್ಣ ಮತ್ತು ಮಧ್ಯಮ ಬೆಳೆಗಾರರಿಗಾಗಲೀ, ಕಾರ್ಮಿಕರಿಗಾಗಲೀ ಸಿಗುವುದಿಲ್ಲ. ಶ್ರೀಮಂತ ರೈತರೂ, ದೊಡ್ಡ ಭೂಮಾಲಕರೂ, ಭಾರೀ ದೊಡ್ಡ ವ್ಯಾಪಾರಸ್ಥರೂ ಇದರ ಲಾಭ ಗಿಟ್ಟಿಸಿಕೊಳ್ಳುವರು. ಆಹಾರಧಾನ್ಯಗಳ ಮತ್ತು ವಿದೇಶ ವಿನಿಮಯದ ಕೊರತೆ ಪರಿಸ್ಥಿತಿಯಲ್ಲಿ ಜಾರಿಗೆ ಬಂದ ಸಹಾಯಧನ ನೀಡಿಕೆಯು ಇನ್ನೂ ಮುಂದುವರಿಯುವುದರಲ್ಲಿ ಅರ್ಥವಿಲ್ಲ. ರಾಷ್ಟ್ರದ ರಕ್ಷಣಾ ಖಾತೆಯ ವೆಚ್ಚವು ವಿಪರೀತವಾಗಿ ಹೆಚ್ಚುತ್ತಿದ್ದು ಅಭಿವೃದ್ಧಿಯೇತರ ಸಾರ್ವಜನಿಕ ವೆಚ್ಚದ ಶೇ. 30 ರಷ್ಟು ಈ ಖಾತೆಗೇ ಮೀಸಲಾಗುತ್ತಿದೆ. ಪಾನನಿಷೇದವನ್ನು ಜಾರಿಗೆ ತರಲು ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ. 800 ಕೋಟಿಯಷ್ಟು ಮೀಸಲಾಗಿಡಲಾಗಿದೆ.

ಇಂಡಿಯನ್ ಎಕ್ಸ್‌ಪ್ರೆಸ್ (23-5-79)ನಲ್ಲಿ ಕುಲದೀಪ್ ನಾಯರ್ ಅವರು ಅಪಹಾಸ್ಯ ಮಾಡಿದಂತೆ ಕೃಷಿ, ರಕ್ಷಣೆ ಮತ್ತು ಪಾನನಿರೋಧ ಖಾತೆಗಳ ವೆಚ್ಚಗಳು ಉಪಪ್ರಧಾನಿಗಳಾದ ಚರಣಸಿಂಗ್, ಜಗಜೀವನರಾಂ ಮತ್ತು ಪ್ರಧಾನಿ ಮುರಾರ್ಜಿಯವರ 'ಪವಿತ್ರ ದನಗಳು' ಆಗಿರುವುದರಿಂದ ಅವುಗಳನ್ನು ಕೊಲ್ಲುವಂತಿಲ್ಲ, ವೆಚ್ಚಗಳಲ್ಲಿ ಕಡಿತಮಾಡುವಂತಿಲ್ಲ! ಆದರೂ ಚೌಧುರಿ ಚರಣಸಿಂಗರು, ಎಸ್. ಎನ್. ಮಿಶ್ರರ ನೇತೃತ್ವದಲ್ಲಿ ಸಾರ್ವಜನಿಕ ವೆಚ್ಚದಲ್ಲಿ ಹೀಗೆ ಕಡಿತ ಮಾಡಬಹುದೆಂದು ಅಧ್ಯಯನ ಮಾಡಲು ಒಂದು ವಿಶೇಷ ಆಯೋಗವನ್ನು ನೇಮಿಸಿ ತನ್ನ ಜವಾಬ್ದಾರಿ ಜಾರಿಸಿಕೊಂಡಿದ್ದಾರೆ. ಮುರಾರ್ಜಿ ದೇಸಾಯಿ, ಹೆಚ್. ಎಂ. ಪಟೇಲ್ ಕೇಂದ್ರ ಮಂತ್ರಿಗಳಿಗೆ, ರಾಜ್ಯ ಮಂತ್ರಿಗಳಿಗೆ ಹಾಗೂ ಕೇಂದ್ರ ಖಾತೆಗಳಿಗೆ ಸಾರ್ವಜನಿಕ ವೆಚ್ಚ ಕಡಿತ ಮಾಡಲು ತುರ್ತಿನ ಸುತ್ತೋಲೆ ಕಳಿಸಿ ತಮ್ಮ ಜವಾಬ್ದಾರಿ ಜಾರಿಸಿದ್ದಾರೆ. ವಿಶೇಷ ಆಯೋಗಗಳಿಂದ, ತುರ್ತು ಸುತ್ತೋಲೆಗಳಿಂದ ಬೆಲೆಏರಿಕೆ, ಹಣದುಬ್ಬರವನ್ನು ತಡೆಯುವುದೆಂದರೆ, ಭಾಷಣಗಳಿಂದಲೇ ಬಡತನ ಹೋಗಲಾಡಿಸಲು ಹೊರಟಂತೆ!

ಬೆಲೆಏರಿಕೆ ಮತ್ತು ಬ್ಯಾಂಕುಗಳ ಸಾಲ:

1977-78 ಮತ್ತು 1978-79ರ ಮೊದಲ ಭಾಗದಲ್ಲಿ ವಾಣಿಜ್ಯ ಬ್ಯಾಂಕುಗಳ ಸಾಲಗಳು ಸಾಕಷ್ಟು ಹತೋಟಿಯಲ್ಲಿದ್ದವು. ಬೆಲೆಗಳೂ ಸಾಕಷ್ಟು ಸ್ಥಿರವಾಗಿದ್ದವು. 1978-79ರ ಉತ್ತರಾರ್ಧದಲ್ಲಿ ದೇಶದ ಕೆಲವು ಭಾಗಗಳಲ್ಲಿ ನೆರೆಹಾವಳಿ ಮತ್ತು ರಾಜಕೀಯ ಅನಿಶ್ಚಿತತೆಗಳಿಂದಾಗಿ, ವ್ಯಾಪಾರಿಗಳೂ ಸಾಹುಕಾರರೂ ಮತ್ತೆ ಬೆಲೆಏರಿಕೆಯ ನಿರೀಕ್ಷೆಯಲ್ಲಿ ತೊಡಗಿದರು. ಅವರು ತಮ್ಮ ಲಾಭ ಹೆಚ್ಚಿಸಿಕೊಳ್ಳಲು, ಬ್ಯಾಂಕುಗಳಿಂದ ಧಾರಾಳವಾಗಿ ಸಾಲ ಪಡೆದು ತಮ್ಮ ಸ್ಟಾಕ್ ಹೆಚ್ಚಿಸಿಕೊಳ್ಳಲಾರಂಭಿಸಿದರು. ಇಷ್ಟರಲ್ಲಿಯೇ ರಿಸರ್ವ್‌ಬ್ಯಾಂಕ್, ವಾಣಿಜ್ಯಬ್ಯಾಂಕುಗಳ ಸಾಲ ನೀಡಿಕೆಯ ಬಡ್ಡಿದರಕ್ಕೆ ಗರಿಷ್ಟ ಮಿತಿಯನ್ನೂ ಹೇರಿ ಅದರಲ್ಲಿಯೂ ಕಡಿತಕ್ಕೆ ಒಪ್ಪಿಕೊಂಡಿತು. ಈ ಹಿಂದೆಯೇ ತಿಳಿಸಿದಂತೆ, 1978-79ರ ಉತ್ತರಾರ್ಧದಲ್ಲಿ ವಾಣಿಜ್ಯ ಬ್ಯಾಂಕುಗಳು ನೀಡಿದ ಒಟ್ಟು ಸಾಲದ ಮೊತ್ತವು ರಿಸರ್ವ್‌ಬ್ಯಾಂಕ್ ನಿಗದಿ ಮಾಡಿದುದಕ್ಕಿಂತ ಎರಡುಪಾಲು ಹೆಚ್ಚಾಯಿತು. ಬ್ಯಾಂಕುಗಳ ಸಾಲಗಳನ್ನು ನಿಯಂತ್ರಿಸಲು ರಿಸರ್ವ್‌ಬ್ಯಾಂಕ್ ಈಗ ಮೂರನೇ ಬಾರಿ ವಿಫಲವಾಯಿತು. (ಈ ಹಿಂದೆ 1973-74 ಮತ್ತು 1976-77ರಲ್ಲಿ).

1978-79ರಲ್ಲಿ ಬ್ಯಾಂಕುಗಳು ನೀಡಿದ ಸಾಲಗಳು ಉತ್ಪಾದನೆಯ ಉದ್ದೇಶಕ್ಕಿಂತಲೂ, ವ್ಯಾಪಾರದ ಉದ್ದೇಶಕ್ಕೇ ಹೆಚ್ಚಾಗಿದ್ದವು. ರಿಸರ್ವ್‌ಬ್ಯಾಂಕ್ ಈ ಅವಧಿಯಲ್ಲಿ ಬ್ಯಾಂಕುಗಳಿಗೆ ರೂ. 215 ಕೋಟಿ ಹೆಚ್ಚು ಸಾಲ ನೀಡಿತು. 1977-78ರಲ್ಲಿ ರಿಸರ್ವ್‌ಬ್ಯಾಂಕ್ ಬ್ಯಾಂಕುಗಳಿಗೆ ನೀಡಿದ ಒಟ್ಟು ಸಾಲದ ಮೊತ್ತವು ಹಿಂದಿನ ವರುಷಕ್ಕಿಂತ ರೂ. 595 ಕೋಟಿ ಕಡಿಮೆಯಾಗಿತ್ತು.

(6ನೇ ಪುಟ ನೋಡಿ)

ಸಂಸತ್ತು ಮತ್ತು ಯೋಜನೆ

—ಅಶೋಕ್ ಬೋಸ್

ಭಾರತೀಯ ಸಂಸತ್ ಸಮೂಹ ಮತ್ತು ಸಂಸತ್ ಅಧ್ಯಯನಗಳ ಮಂಡಲಿ ಇವರುಗಳ ಆಶ್ರಯದಲ್ಲಿ 17-3-79 ರಂದು ನವದೆಹಲಿಯಲ್ಲಿ ನಡೆದ "ಸಂಸತ್ತು ಮತ್ತು ಯೋಜನೆ" ಎಂಬ ವಿಚಾರ ಗೋಷ್ಠಿಯಲ್ಲಿ, ಪಶ್ಚಿಮ ಬಂಗಾಳದ ವಿಧಾನಸಭಾ ಸದಸ್ಯ ಶ್ರೀ ಅಶೋಕ್‌ಬೋಸ್ ಅವರು ಮಾಡಿದ ಭಾಷಣದ ಕನ್ನಡ ರೂಪಾಂತರ ಇದು.

ಭಾರತದಂಥ ಅನಭಿವೃದ್ಧಿ ದೇಶದಲ್ಲಿ, ಸರ್ಕಾರವು, ದೇಶದ ಇಡೀ ಆರ್ಥಿಕ ವ್ಯವಸ್ಥೆಯಲ್ಲಿ ಪ್ರವೇಶಿಸಿ, ಭಾಗವಹಿಸುವುದಕ್ಕೆ ರಾಷ್ಟ್ರೀಯ ಆರ್ಥಿಕ ಯೋಜನೆಯೇ ಅತ್ಯಂತ ಪ್ರಮುಖವಾದ ಮತ್ತು ಶಕ್ತಿಯುತವಾದ ಸಾಧನವಾಗಿದೆ. ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುವುದರಲ್ಲಿ ಸಂಸತ್ತು ವಹಿಸುವ ಪಾತ್ರಕ್ಕೆ ನಮ್ಮ ಯೋಜನಾ ಆಯೋಗದ ಪ್ರಕಾರ ಹೆಚ್ಚು ಪ್ರಾಶಸ್ತ್ಯ ಕೊಡುವಂತಿಲ್ಲ. ಪಂಚವಾರ್ಷಿಕ ಯೋಜನೆಗಳ ಪರಿಶೀಲನೆ ನಮ್ಮ ಸಂಸತ್ತು ಒಂದು ವಿಧಾನವನ್ನು ರೂಪಿಸಿಕೊಂಡಿದೆ. ಅನೇಕ ಸಂಸತ್ ಸಮಿತಿಗಳನ್ನು ನೇಮಿಸಲಾಗಿದ್ದು, ಯೋಜನೆಯ ಕೆಲವು ವಿಶಿಷ್ಟ ಅಂಶಗಳನ್ನು ಚರ್ಚಿಸುವ ಅಧಿಕಾರ ಅವಕ್ಕೆ ಇರುತ್ತದೆ. ಸಮಿತಿಗಳ ಶಿಫಾರಸುಗಳನ್ನು ಸಂಸತ್ತಿನಲ್ಲಿ ಮಂಡಿಸಲಾಗುತ್ತದೆ. ಈ ಶಿಫಾರಸುಗಳನ್ನು ಕರಡು ಯೋಜನೆಯ ಜೊತೆಗೆ ಲೋಕಸಭೆ ಮತ್ತು ರಾಜ್ಯಸಭೆಗಳೆರಡರಲ್ಲೂ ಮಂಡಿಸಲಾಗುತ್ತದೆ. ನಂತರ ಸಂಸತ್ತಿನ ಎರಡೂ ಸದನಗಳು ಕರಡು ಯೋಜನೆಯನ್ನು ಅಂಗೀಕರಿಸುವ ಗೊತ್ತುವಳಿಗಳನ್ನು ಸ್ವೀಕರಿಸುತ್ತವೆ. ಈ ವಿಧಾನದಿಂದ ಸಂಸತ್ತಿನ ಬಹು ಪಾಲು ಸಮಯ ಉಳಿತಾಯವಾಗುತ್ತದೆ. ಅಲ್ಲದೆ, ಯೋಜನೆಯ ವಿವಿಧ ಅಂಶಗಳಾದ ನೀತಿಗಳು, ಸ್ವರೂಪ, ಸಂಪನ್ಮೂಲಗಳ ಹಂಚಿಕೆ ಮತ್ತಿತರ ವಿಷಯಗಳನ್ನು ಸಮಿತಿಗಳಲ್ಲಿರುವ ಸಂಸತ್ ಸದಸ್ಯರು ಸಂಪೂರ್ಣವಾಗಿ ಮತ್ತು ವಿವರವಾಗಿ ಚರ್ಚಿಸಲೂ ಅವಕಾಶ ನೀಡಿದಂತಾಗುತ್ತದೆ. ಆದರೆ, ಪ್ರಾದೇಶಿಕ ಅಂತಗಳು, ಸ್ಥಳೀಯ ಸ್ಥಿತಿಗತಿಗಳು ಮತ್ತು ವಿಶಾಲವಾಗಿ ಹರಡಿಕೊಂಡಿರುವ ವಿಭಾಗಗಳಾದ ಕೃಷಿ, ಕೈಗಾರಿಕೆ, ಮಾರುಕಟ್ಟೆ, ಮಾರುಕಟ್ಟೆ ಸಂಬಂಧಗಳು ಇವೆಲ್ಲ ಯೋಜನಾ ನೀತಿಗೆ ತುಂಬ ಹೊಂದಿಕೊಂಡಂತಿರುವುದರಿಂದ ಇವಿಲ್ಲದೆ ಭಾರತದಂಥ ವೈಶಾಲ್ಯದ ದೇಶದಲ್ಲಿ ಯೋಜನೆ ಎಂಬ ಚಟುವಟಿಕೆಯು ವೈವಿಧ್ಯ ಮತ್ತು ಸಂಕೀರ್ಣತೆಗೆ ಯಾವ ಅರ್ಥವೂ ಇರುವುದಿಲ್ಲ. ರಾಷ್ಟ್ರೀಯ ಆರ್ಥಿಕತೆಯನ್ನು ಇಡಿಯಾಗಿ ರೂಪಿಸುವುದಕ್ಕಾಗಿ ರಾಷ್ಟ್ರಮಟ್ಟದಲ್ಲಿ ಪ್ರಮುಖ ಅಂಶಗಳನ್ನು ನಿರ್ಧರಿಸುವುದರಲ್ಲಿ ಸಂಸತ್ತಿನ ಪಾತ್ರವನ್ನು ನಾನು ಪೂರ್ಣವಾಗಿ ಪ್ರಶಂಸಿಸುತ್ತೇನಾದರೂ, ಯೋಜನೆಗಳ ರಚನೆ ಮತ್ತು ಜಾರಿಗೊಳಿಸುವಿಕೆ, ಇವೆರಡರ ನಡುವೆ ಇರುವ ಅಂತರವನ್ನು ಮುಚ್ಚುವುದರಲ್ಲಿ ಸಂಸತ್ತಿನ ಕೇಂದ್ರೀಕೃತ ನಿರ್ಣಯಗಳು ಸೋಲುತ್ತವೆ ಎಂದು ನಾನು ಹೇಳಲೇಬೇಕಾಗಿದೆ. ಈ ಮುಖ್ಯ ಅಂಶವನ್ನು ಕುರಿತಂತೆ, ನಮ್ಮ ಪಂಚವಾರ್ಷಿಕ ಯೋಜನೆಗಳ ಅಂತ್ಯ ತೀರ್ಮಾನದಲ್ಲಿ ಸಂಸತ್ ಅನುಸರಿಸುವ ವಿಧಾನದಲ್ಲಿರುವ ಕೆಲವು ಕೊರತೆಗಳನ್ನು ಇಲ್ಲಿ ಚರ್ಚಿಸಲು ಇಚ್ಛಿಸುತ್ತೇನೆ.

ಯೋಜನಾ ಧ್ಯೇಯಗಳ ಬಗ್ಗೆ ನಿರ್ಧಾರಗಳನ್ನು ಹೇರುವುದೂ ಅಲ್ಲದೆ, ಈ ಗುರಿಗಳನ್ನು ಸಾಧಿಸುವ ವಿಧಾನವನ್ನು ಭಾರತದ ರಾಜ್ಯಗಳಿಗೆ ಅನೇಕ ಸಂದರ್ಭಗಳಲ್ಲಿ ಆದೇಶಿಸಲಾಗುತ್ತದೆ. ಸಣ್ಣ ಅಂಶಗಳಲ್ಲಿ ಸ್ವಲ್ಪ ವ್ಯತ್ಯಾಸವಾಗುವುದಕ್ಕೂ ಅನುಮತಿ ನೀಡುವುದಲ್ಲ. ಇಂಥ ಪರಿಸ್ಥಿತಿಯಲ್ಲಿ, ಕೇಂದ್ರದ ಕಾರ್ಯಕ್ರಮದಿಂದ ತಮಗೆ ಸೀಮಿತ ಪ್ರಯೋಜನ ಅಥವಾ ಅನ್ಯಾಯವಿದ್ದರೂ ಸಹ ಅದನ್ನು ಒಪ್ಪಿಕೊಳ್ಳದೆ ರಾಜ್ಯಗಳಿಗೆ ಬೇರೆ ಮಾರ್ಗವೇ ಇಲ್ಲ. ತಮ್ಮ ಬೆಳವಣಿಗೆ ಶಕ್ತಿ ಮತ್ತು ಅಗತ್ಯಗಳನ್ನು ನಿರ್ಲಕ್ಷಿಸಿ, ಪ್ರಾಮುಖ್ಯತೆಯ ರಾಷ್ಟ್ರೀಯ ಮಾದರಿಯನ್ನು ಮತ್ತು ಕೇಂದ್ರದ ನಿರ್ದೇಶಗಳನ್ನು ಒಪ್ಪಿಕೊಳ್ಳುವುದೂ ಇಂಥ ಪರಿಸ್ಥಿತಿಯಲ್ಲಿ ರಾಜ್ಯಗಳಿಗೆ ಅನಿವಾರ್ಯವಾಗುತ್ತದೆ. ಆರ್ಥಿಕ ತಜ್ಞರಾದ ಎಫ್. ಎ. ಹಯಕ್ ಅವರು ಹೇಳಿದ "ಸಮಯ ಮತ್ತು ಸ್ಥಳದ ಪರಿಸ್ಥಿತಿಗಳು" ಎಂಬ ಅಂಶವನ್ನೇ ಪರಿಣಾಮಕಾರಿಯಾಗಿ ಇಲ್ಲಿ ಗಣಿಸಲಾಗುವುದಿಲ್ಲ. ಹೀಗಾಗಿ ಪ್ರಜಾಪ್ರಭುತ್ವವಾದಿ ಸಂಸ್ಥೆಗಳಾದ ಜಿಲ್ಲಾ ಪರಿಷತ್, ಪಂಚಾಯತ್ ಸಮಿತಿ ಮುಂತಾದುವುಗಳಿಗಿರಲಿ, ರಾಜ್ಯಗಳ ಉತ್ಸಾಹಕ್ಕೂ ತಣ್ಣೀರೆರಚಿದಂತಾಗುತ್ತದೆ. ಆದರೆ ಪರಿಣಾಮಕಾರಿ ಯೋಜನೆಯನ್ನು ಮಾಡಬೇಕಾದರೆ, ರಾಜ್ಯದ ಯೋಜನೆಯನ್ನೂ ಕೂಡ, ವೆಚ್ಚದ ಕಾರ್ಯಕ್ರಮಗಳ ಮೊತ್ತ ಎನ್ನುವುದಕ್ಕಿಂತ ಹೆಚ್ಚಾಗಿ ಪರಿಗಣಿಸಬೇಕಾದದ್ದು ಮುಖ್ಯ. ಯೋಜನಾ ಆಯೋಗದ ಹಿನ್ನೆಲೆ ಪತ್ರವೊಂದರಲ್ಲಿ ಸೂಚಿಸಿರುವ ಹಾಗೆ ಅವುಗಳಿಗೆ ಅದರದೇ ಆದ ಆಂತರಿಕ ತರ್ಕವೊಂದಿರಬೇಕು. ಇಂಥ ಪರಿಸ್ಥಿತಿ ಇರುವುದಕ್ಕೆ ಮುಖ್ಯ ಕಾರಣವೆಂದರೆ, ಯೋಜನಾ ನಿರ್ಧಾರದ ಕೇಂದ್ರೀಕರಣ ಮತ್ತು ಕೇಂದ್ರದ ಮಟ್ಟದಲ್ಲಿಯೇ ಸಂಪನ್ಮೂಲಗಳ ಹಂಚಿಕೆ ಅಧಿಕಾರ ಇಟ್ಟುಕೊಂಡಿರುವುದು. ಕೇಂದ್ರ ಸಹಾಯಗಳ ವ್ಯವಸ್ಥೆಯಿಂದ, ಯೋಜನೆಯ ಜಾರಿಯಲ್ಲಿ ದುರಾದೃಷ್ಟವಶಾತ್ ಸಾಕಷ್ಟು ಗೊಂದಲ, ವಿಳಂಬ ಮತ್ತು ಅಸ್ಥಿರತೆಗಳು ಬಂದಿವೆ. ಯೋಜನೆಯ ವಿಕೇಂದ್ರೀಕರಣವನ್ನು ಇದುವರೆಗೂ, ಕೆಳಹಂತದ ಅಧಿಕಾರಶಾಹಿಗಳಿಗೆ ಕೆಲವು ಅಧಿಕಾರಗಳನ್ನು ಬಿಟ್ಟುಕೊಡುವುದು ಎಂದೇ ತಿಳಿಯಲಾಗಿದೆ. ನಿಜವಾದ ವಿಕೇಂದ್ರೀಕರಣ ಎಂದರೆ, ಸಾಧ್ಯವಾದಷ್ಟು ಕೆಳಹಂತದ ಸಮುದಾಯ ಪ್ರತಿನಿಧಿಗಳಿಗೆ ಅಧಿಕಾರವನ್ನು ನಿಯೋಗಿಸುವುದು ಎಂದರ್ಥವಾಗಬೇಕು. ಹಾಗೆ ನೋಡಿದರೆ ಕೆಳಹಂತದ ಯೋಜನೆಗಳಿಗೆ ಸಾಕಷ್ಟು ಸ್ವಾಯತ್ತತೆ ಇರಬೇಕು. ಮೂಲಭೂತ ದೊಡ್ಡ ಸಮಸ್ಯೆಗಳ ಬಗ್ಗೆ ರಾಷ್ಟ್ರೀಯ ಯೋಜನೆ ಪ್ರಯತ್ನ ನಡೆಸಬೇಕು. ಪ್ರಾದೇಶಿಕ ಅಥವಾ ಉಪಪ್ರಾದೇಶಿಕ ಹಂತಗಳು ಅನುಸರಿಸುವ ಕಾರ್ಯಕ್ರಮಗಳು ಮತ್ತು ಪ್ರಯತ್ನಗಳು ರಾಷ್ಟ್ರೀಯ ಯೋಜನೆಯ ಪ್ರಯತ್ನವನ್ನು ಇನ್ನಷ್ಟು ಬಲಪಡಿಸಬೇಕು. ಕೆಳಹಂತದ ಯೋಜನೆ ಇಲ್ಲದಿದ್ದರೆ ರಾಷ್ಟ್ರೀಯ ಯೋಜನೆಯನ್ನು ಸರಿಯಾಗಿ ಜಾರಿಗೊಳಿಸಲು ಸಾಧ್ಯವಿಲ್ಲವೆಂಬುದನ್ನು ಗುರುತಿಸಲೇಬೇಕಾದ ಕಾಲ ಈಗ ಬಂದಿದೆ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ನಾವು ದೊಡ್ಡ ಪ್ರಮಾಣದ ಯೋಜನೆಯೊಳಗೇ ಇದ್ದು ಕೆಳಹಂತದ ಯೋಜನೆಗಳನ್ನು ರೂಪಿಸಿಯೇ ಇಲ್ಲ. ಕೆಳಹಂತದ ಯೋಜನಾ ವಿಧಾನದಲ್ಲಿ ಮಾತ್ರ ಜನತೆಯ ಸಹಕಾರವನ್ನು ಪಡೆಯುವುದು ಸಾಧ್ಯ. ಯೋಜನಾ ಪ್ರಯತ್ನಗಳು ಸಫಲವಾಗಬೇಕಾದರೆ ಈ ಅಂಶ ಅತಿ ಮುಖ್ಯವಾದದ್ದು.

ಈಗ ರಾಜ್ಯ ಯೋಜನೆಗಳಿಗೆ ಸಂಪನ್ಮೂಲಗಳನ್ನು ಹಂಚುವ ಪ್ರಶ್ನೆಯನ್ನು ಎತ್ತಿಕೊಳ್ಳೋಣ. ಕೇಂದ್ರ-ರಾಜ್ಯಗಳ ಆರ್ಥಿಕ ಸಂಬಂಧಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದು ಇಲ್ಲಿ ಅನುಚಿತವಾಗಲಾರದು. ನಿಮಗೆ ಬಹುಶಃ ಗೊತ್ತಿರುವ ಹಾಗೆ, 1978-83ರ ಕರಡು ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ ಮತ್ತು ಕೇಂದ್ರ-ರಾಜ್ಯ ಆರ್ಥಿಕ ಸಂಬಂಧಗಳ ಪುನರ್ವಿಮರ್ಶೆಯನ್ನು ಮಾಡಲು ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯು ಒಂದು ಸಮಿತಿಯನ್ನು ನೇಮಿಸಿರುವ ಸಂದರ್ಭದಲ್ಲಿ, ಸಂಪನ್ಮೂಲಗಳ ಹಂಚಿಕೆಯ ಬಗ್ಗೆ ನಮ್ಮ ರಾಜ್ಯವು ಅನೇಕ ಸಲಹೆಗಳನ್ನು ಮುಂದಿಟ್ಟಿದೆ. ಏಳನೇ ಆರ್ಥಿಕ ಸಮಿತಿಗೆ ನಮ್ಮ ರಾಜ್ಯ ಸರ್ಕಾರವು ಒಂದು ಮನವಿಯನ್ನು ಅರ್ಪಿಸಿದ್ದು, ಅದರಲ್ಲೂ ಪಂಚವಾರ್ಷಿಕ ಯೋಜನೆಗಳ ಸಂಪನ್ಮೂಲ ಹಂಚಿಕೆ ಮಾದರಿಯ ನಿರ್ಧಾರಗಳ ಬಗ್ಗೆ ಸಲಹೆಗಳನ್ನು ಕೊಡಲಾಗಿದೆ. ರಾಷ್ಟ್ರೀಯ ಯೋಜನೆಯ ಸಾರ್ವಜನಿಕ ವಲಯದ ಹಂಚಿಕೆಯಲ್ಲಿ ಸುಮಾರಾಗಿ $\frac{1}{3}$ ಭಾಗಕ್ಕೆ ರಾಜ್ಯ ಸರ್ಕಾರ ನೇರ ಜವಾಬ್ದಾರಿಯಾಗಿರಬೇಕೆಂದು ನಮ್ಮ ಸರ್ಕಾರದ ಅಭಿಪ್ರಾಯ. ಇದರಿಂದ, ನಿಮಗೇ ತಿಳಿಯುವಂತೆ, ಆರ್ಥಿಕ ಆಡಳಿತ ವ್ಯವಸ್ಥೆಯು ಚೌಕಟ್ಟಿನ ವಿಕೇಂದ್ರೀಕರಣವಾಗಿ, ಕೇಂದ್ರದಿಂದ ರಾಜ್ಯಗಳಿಗೆ ಸಾಕಷ್ಟು ಪ್ರಮಾಣದ ಹಣ ವರ್ಗಾಯಿಸಲ್ಪಡುತ್ತದೆ. ಯೋಜನೆಯ ಸಾರ್ವಜನಿಕ ವಲಯದ $\frac{2}{3}$ ಭಾಗ ಅಥವಾ ಅದಕ್ಕಿಂತ ಹೆಚ್ಚು ಭಾಗ ರಾಜ್ಯಕ್ಕೆ ಸೇರಿದರೆ, ಅದರ ಪ್ರಕಾರ ಸಂಪನ್ಮೂಲಗಳನ್ನೂ ಒದಗಿಸಬೇಕೆಂದು ನಮ್ಮ ರಾಜ್ಯ ಸರ್ಕಾರ ವಿಶೇಷವಾಗಿ ಕೇಳಿಕೊಂಡಿದೆ. ಕೇಂದ್ರವು ಸಂಪಾದಿಸುವ ಕಂದಾಯ, ಸಾಲ, ವಿದೇಶಿ ಸಾಲಗಳ ಶೇಕಡಾ 75 ರಷ್ಟು ಪಾಲು, ಸಾರ್ವಜನಿಕ ವಲಯದ ಕಾರ್ಯಗಳಿಗಾಗಿ ಬ್ಯಾಂಕು ನೀಡುವ ಸಾಲ, ಖೋತಾ ಆರ್ಥಿಕತೆಯಿಂದ ಬರುವ ಸಂಪನ್ಮೂಲಗಳು ಇವುಗಳ ಒಟ್ಟು ಮೊತ್ತದಲ್ಲಿ ಶೇಕಡಾ 75 ರಷ್ಟು ಭಾಗವನ್ನು ರಾಜ್ಯಗಳಿಗೆ ಮೀಸಲಿಡಬೇಕೆಂದು ನಾವು ಆಶಿಸುತ್ತೇವೆ.

ಅಂತರ ರಾಜ್ಯ ಸಂಪನ್ಮೂಲ ಹಂಚಿಕೆಯ ವಿಚಾರದಲ್ಲಿ, ಖಂಡಿತವಾಗಿಯೂ ಸಂಸತ್ತಿಗೆ ಪ್ರಮುಖ ಪಾತ್ರವಿದೆ. ವಿವಿಧ ರಾಜ್ಯಗಳಿಂದ ಬಂದಿರುವ ಸಮುದಾಯ ಪ್ರತಿನಿಧಿಗಳು ತಮ್ಮ ರಾಜ್ಯಗಳಿಗೆ ಹೆಚ್ಚು ಸಂಪನ್ಮೂಲ ಒದಗಿಸಬೇಕೆಂದು ಸಂಸತ್ತಿನಲ್ಲಿ ಒತ್ತಾಯಿಸುತ್ತಾರೆ. ರಾಜ್ಯಗಳ ನಡುವೆ ಸಂಪನ್ಮೂಲಗಳನ್ನು ಹಂಚುವಾಗ ಎರಡು ಅಂಶಗಳನ್ನು ಗಮನಿಸಬೇಕೆಂದು ನನ್ನ ಅನ್ನಿಸಿಕೆ-

1. ರಾಜ್ಯದ ಜನಸಂಖ್ಯೆ ಮತ್ತು
2. ಹಿಂದುಳಿದಿರುವಿಕೆಯ ಸೂಚಿ.

ಈ ಎರಡು ಅಂಶಗಳಿಗೆ 80:20ರ ಪ್ರಮಾಣದಲ್ಲಿ ಪ್ರಾಮುಖ್ಯ ನೀಡಬೇಕು. ಈ ಉಚಿತವಾದ ಸೂತ್ರಕ್ಕೆ ಒಪ್ಪಿ, ರಾಜ್ಯಗಳ ಅಗತ್ಯಗಳಿಗೆ ಸಂಸತ್ ಸದಸ್ಯರು ನ್ಯಾಯ ಒದಗಿಸುವರೆಂದು ನಾನು ಭಾವಿಸುತ್ತೇನೆ.

ಕೊನೆಯದಾಗಿ, ಯೋಜನೆಗಳಲ್ಲಿ ಜನತೆಯು ಭಾಗವಹಿಸುವಂತೆ ಮಾಡುವುದರಲ್ಲಿ ಕೆಳಹಂತದ ಯೋಜನೆಗಳು ವಹಿಸುವ ಪಾತ್ರದ ಬಗ್ಗೆ ಹೇಳಬೇಕು. ಜಿಲ್ಲಾ ಪರಿಷತ್, ಪಂಚಾಯತಿ ಸಮಿತಿ ಮತ್ತು ಗ್ರಾಮ ಪಂಚಾಯಿತಿ–ಹೀಗೆ ಮೂರು ಹಂತದ ಪಂಚಾಯತಿ ವ್ಯವಸ್ಥೆಯ ಮೂಲಕ ಪರಿಣಾಮಕಾರಿ ಪ್ರಜಾಪ್ರಭುತ್ವವಾದಿ ವಿಕೇಂದ್ರೀಕರಣವು, ಅದರಲ್ಲೂ ಯೋಜನೆಯ ಕ್ಷೇತ್ರದಲ್ಲಿ, ನಡೆಯಬಹುದು. ಕಳೆದ ಪಂಚಾಯತಿ ಚುನಾವಣೆಯ ನಂತರ ಪಶ್ಚಿಮ ಬಂಗಾಳದಲ್ಲಿ, ಜನಪ್ರಿಯ ಪ್ರಜಾಪ್ರಭುತ್ವವಾದಿ ಸ್ವಯಂ ಸರ್ಕಾರವು ನಿಜವಾಗಿ ರೂಪುತಳೆಯುತ್ತಿದೆ. ಅನೇಕ ಯೋಜನೆಗಳನ್ನು ನಿರ್ವಹಿಸುವುದರಲ್ಲಿ ಪಂಚಾಯತಿಗಳು ಸಾಧ್ಯವಾದಷ್ಟು ಮಟ್ಟಿಗೆ ಸಹಕರಿಸುತ್ತಿವೆ. ಯೋಜನೆಯ ಪ್ರಜಾಪ್ರಭುತ್ವವಾದಿ ವಿಕೇಂದ್ರೀಕರಣ ಎಂದರೆ, ಕೆಳಹಂತದ ಅಧಿಕಾರಶಾಹಿಯ ಕೈಗಳಲ್ಲಿ ಅಧಿಕಾರವು ಕೇಂದ್ರೀಕೃತವಾಗಿ, ಅದು ಸ್ಥಳೀಯ ಭೂಮಾಲೀಕ ಮತ್ತು ಆಸ್ತಿಯುಳ್ಳ ವರ್ಗದ ಜೊತೆ ಸೇರಿಕೊಂಡು ಬಹುಸಂಖ್ಯಾತ ಜನತೆಗೆ ಕೆಳಹಂತದ ಯೋಜನೆಯೇ ಅರ್ಥವಿಹೀನವಾಗುವಂತೆ ಮಾಡು

[6ನೇ ಪುಟ ನೋಡಿ]

ಹುಟ್ಟುತ್ತಿರುವ ಯುವ ಕ್ರಾಂತಿಕಾರಿಗಳು

ಹಸಿದ ಹೊಟ್ಟೆಗಳ ಆಹಾರವಾಗುತ್ತಿದೆ
ಕೆಂಪು ಭೂಮಿಯ ಸ್ವಾಗತಕ್ಕೆ ಜಯಕಾರವಾಗುತ್ತಿದೆ
ನೂರಾರು ವರ್ಷಗಳಿಂದ ಶೋಷಣೆಗೀಡಾದ
ಸಮಾಜವನ್ನು ಮುಕ್ತಮಾಡಲು
ಹುಟ್ಟುತ್ತಿರುವರು ಯುವ ಕ್ರಾಂತಿಕಾರಿಗಳು.

ಶ್ರೀಮಂತಿಕೆಯನ್ನು ಅಳಿಸಲು
ಸಮಾಜವಾದವನ್ನು ಬೆಳೆಸಲು
ಬಿರುಗಾಳಿಯಂತೆ ಮುನ್ನುಗ್ಗುತಿರುವರು
ಯುವ ಕ್ರಾಂತಿಕಾರಿಗಳು.

ಬಡತನವನ್ನು ಅಳಿಸಲು
ವೇಶ್ಯಾವೃತವನ್ನು ಕೊನೆಗಾಣಿಸಲು
ನಿರುದ್ಯೋಗವನ್ನು ತೊಳೆಯಲು
ಸಮಾಜವಾದದ ಹಾದಿಯೆಂದು
ಸಾರುತಿಹರು ಯುವ ಕ್ರಾಂತಿಕಾರಿಗಳು.

ಅಂದೇ ಜನಿಸುವನು ಮಾರ್ಕ್ಸ್
ಬಡಜನತೆಯ ಹೃದಯದಲ್ಲಿ
ಎಲ್ಲೆಲ್ಲು ಮೊಳಗುವುದು ಕ್ರಾಂತಿಯಗಾನ
ಅಂದೆ ಬರುವುದು ಶೋಷಣಾಮುಕ್ತ ಸಮಾಜ
ಕೊನೆಗಾಣುವುದು ಹಸಿದ ಹೊಟ್ಟೆಗಳ ಜೀವನ.

ಎಂ. ಮೌಲಾಖಾನ್,

ಖಾಸಗಿ ನಿರ್ವಹಣೆಯ ಶಿಕ್ಷಣದಿಂದ ಅದರ ಸತ್ವದ ವಿಕೃತಿ

"1979ರ ಶಿಕ್ಷಣದ ಬಗ್ಗೆ ಕರಡು ರಾಷ್ಟ್ರೀಯ ನೀತಿಯನ್ನು ಶಿಕ್ಷಣ ಸಚಿವ ಡಾ. ಪಿ. ಸಿ. ಚಂದ್ರ ಅವರು ಸಂಸತ್ತಿನಲ್ಲಿ ಮಂಡಿಸಿದ್ದಾರೆ. ಇದು ಯಾವ ತರಹದಲ್ಲೂ ಸಂಕ್ಷಿಪ್ತ ದಾಖಲೆ ಅಲ್ಲ. 23 ವಿಭಾಗಗಳನ್ನಾಗಿ ಅದನ್ನು ವಿಭಜಿಸಲಾಗಿದ್ದು ಅದನ್ನು ಸಮಗ್ರವಾಗಿ ಮಾಡುವಂತೆ ಕಾಣುವ ಅನೇಕ ವಿಚಾರಗಳನ್ನು ಇದು ಒಳಗೊಂಡಿದೆ.

ದಾಖಲೆಯಲ್ಲಿ ವಿಸ್ತಾರವಾಗಿ ಚರ್ಚಿತವಾಗಿರುವ ವಿಚಾರಗಳಾದ ವಯಸ್ಕ ಶಿಕ್ಷಣ, ಸೆಕೆಂಡರಿ ಶಿಕ್ಷಣ, ಪ್ರೌಢ ಶಿಕ್ಷಣ ಮುಂತಾದುವುಕ್ಕೆ ಸಂಬಂಧಿಸಿದ ಕರ್ತವ್ಯಗಳು, ಉಚಿತ ಮತ್ತು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ನಿರ್ದೇಶಕ ತತ್ವದ ಜಾರಿಯ ಜವಾಬ್ದಾರಿ ಯಾರ ಮೇಲಿದೆ ಎಂಬ ಮೂಲಭೂತ ಪ್ರಶ್ನೆಗೆ ಉತ್ತರಿಸುವುದಿರಲಿ, ಆ ಪ್ರಶ್ನೆಯನ್ನೇ ಮೊದಲು ಎತ್ತಿಲ್ಲ. ಪಠ್ಯದ ಸಿದ್ಧತೆ, ವಿದ್ಯಾರ್ಥಿಗಳ ದಾಖಲಾತಿ, ಶಿಕ್ಷಕರ ನೇಮಕ ಮತ್ತು ಶಿಕ್ಷಕೇತರ ಸಿಬ್ಬಂದಿಯ ನೇಮಕ, ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಮುಂತಾದ ಪ್ರಶ್ನೆಗಳನ್ನು ನಿರ್ಧರಿಸುವವರು ಯಾರು?

ರಾಜಕೀಯ ಹಿನ್ನೆಲೆಯ ಅಭಾವ:

ನಮ್ಮದು ಜಾತ್ಯತೀತ, ಪ್ರಜಾಪ್ರಭುತ್ವವಾದಿ ಮತ್ತು ಸಮಾಜವಾದಿ ಗಣರಾಜ್ಯವೆಂದು ಸಂವಿಧಾನ ಹೇಳುತ್ತದೆ. ಖಾಸಗಿ ವ್ಯಕ್ತಿಗಳು ಮತ್ತು ಗುಂಪುಗಳು ಅದರಲ್ಲೂ ಜಾತಿ ಮತ್ತು ಮತೀಯ ಗುಂಪುಗಳ ಜಾತೀಯ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳ ಒಡೆತನ ಹೊಂದಿ ಅದನ್ನು ನಿರ್ವಹಿಸಬಹುದು ಎಂಬುದು ಸಂವಿಧಾನದ ಈ ಘೋಷಣೆಯ ಅರ್ಥವೆ? ಶಿಕ್ಷಣ ಸಂಸ್ಥೆಗಳ ಒಡೆತನ ಹೊಂದಿ ಅದನ್ನು ನಿರ್ವಹಿಸುವ ಖಾಸಗಿ ವ್ಯಕ್ತಿಗಳು ಮತ್ತು ಗುಂಪುಗಳು ತಮ್ಮ ಸ್ವಂತ ಸ್ವಾರ್ಥ ಉದ್ದೇಶಗಳಿಗಾಗಿ ಈ ಸಂಸ್ಥೆಗಳನ್ನು ಬಳಸಿಕೊಳ್ಳಬಹುದಲ್ಲವೆ? ಜಾತಿ ಮತ್ತು ಮತೀಯವಾದ ಗುಂಪುಗಳ ಹಿಡಿತ ಮತ್ತು ಒಡೆತನದಲ್ಲಿರುವ ಸಂಸ್ಥೆಗಳ ಆಡಳಿತ ನಿರ್ವಹಣೆಯಲ್ಲಿ ಜಾತೀಯ ಮತ್ತು ಕೋಮು ವಿಷ ಸೃಷ್ಟಿಯಾಗುವುದಿಲ್ಲವೆ?

"ಸಮಾಜದ ಕಲ್ಯಾಣ ಮತ್ತು ಏಳಿಗೆಗೆ ಮತ್ತು ನಮ್ಮ ಆದರ್ಶಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸಾಮಾಜಿಕ ನ್ಯಾಯ ಇವುಗಳಿಗೆ ಧಕ್ಕೆ ಬಾರದ ಹಾಗೆ ಸತ್ವಯುತ ಜೀವನದಿಂದ ವ್ಯಕ್ತಿಯು ಬೆಳವಣಿಗೆಯಾಗುವಂತೆ ಮಾಡುವುದು," ಶಿಕ್ಷಣದ ಉದ್ದೇಶ ಎಂದು ಕರಡು ರಾಷ್ಟ್ರೀಯ ನೀತಿ ವಿವರಿಸುತ್ತದೆ. "ಈ ಉದ್ದೇಶದ ಈಡೇರಿಕೆಗೆ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಮಾಜವಾದ ಮುಂತಾದ ಮೌಲ್ಯಗಳನ್ನು ಬಲಪಡಿಸುವುದು ಮತ್ತು ರಾಷ್ಟ್ರೀಯ ಐಕ್ಯತೆ, ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಹೆಮ್ಮೆ ಮತ್ತು ದೇಶದ ಭವಿಷ್ಯದಲ್ಲಿ ನಂಬಿಕೆ ಇವುಗಳನ್ನು ಶಿಕ್ಷಣವು ವೃದ್ಧಿಪಡಿಸಬೇಕು. ವೈಜ್ಞಾನಿಕ ಮತ್ತು ನೈತಿಕ ಮೌಲ್ಯಗಳನ್ನು ಹೆಚ್ಚಿಸುವುದರಲ್ಲಿ ಮತ್ತು ಜ್ಞಾನದ ಸಂಪಾದನೆಗೆ ಸಹಾಯ ಮಾಡುವುದರಲ್ಲಿ ನಮ್ಮ ಪ್ರಯತ್ನ ಇರಬೇಕು" ಎಂದು ಕರಡು ರಾಷ್ಟ್ರೀಯ ನೀತಿ ವಿವರಿಸುತ್ತದೆ.

ಈ ಮೇಲೆ ವಿವರಿಸಿದ ಧ್ಯೇಯವನ್ನು ದೇಶ ಸಾಧಿಸಬೇಕಾದರೆ ಶಿಕ್ಷಣದ ಅಧಿಕಾರಿಗಳು ಯಾವ ರಾಷ್ಟ್ರೀಯ ರಾಜಕೀಯ ಹಿನ್ನೆಲೆ ಹೊಂದಿರಬೇಕು ಎಂಬುದು ದಾಖಲೆಯಲ್ಲಿ ಇಲ್ಲ. ಈ ಹಿನ್ನೆಲೆ ಜಾತಿ ಕಲಹಗಳು, ಕೋಲಾಹಲಗಳು ಮತ್ತು ದಂಗೆಗಳ ಪ್ರಚೋದನೆ ಇತ್ಯಾದಿಗಳಿಂದ ಕೂಡಿದೆ. ಯಾವುದೋ ಒಂದು ಬಗೆಯಲ್ಲಿ ದಿಟ್ಟವಾಗಿ ಜಾತೀಯವಾಗಿರುವ, ಮತೀಯವಾಗಿರುವ, ವಿನಾಶಕಾರಿಯಾಗಿರುವ ಅನೇಕ ಸಂಸ್ಥೆಗಳು ಇವೆ. ಇವು ಜೀವನದ ಇತರ ಕ್ಷೇತ್ರಗಳಲ್ಲಿ ಇರುವ ಹಾಗೆ ಶಿಕ್ಷಣ ಕ್ಷೇತ್ರದಲ್ಲೂ ಚಟುವಟಿಕೆಯಿಂದ ಕೂಡಿವೆ.

ಬಹುಸಂಖ್ಯಾತ ಕೋಮುವಾದ:

ಆಳುತ್ತಿರುವ ಜನತಾಪಕ್ಷದೊಳಗೆ ಅಂಥ ಒಂದು ಸಂಸ್ಥೆಯಾದ ಆರೆಸ್ಸೆಸ್‌ನ "ದ್ವಂದ್ವ ಪಾತ್ರ"ದ ಬಗ್ಗೆ ಉದ್ಭವಿಸಿರುವ ಒಂದು ದೊಡ್ಡ ರಾಜಕೀಯ ಕಲಹದ ವಿಚಾರವನ್ನು ಇಲ್ಲಿ ಯಾರೂ ಎತ್ತದೇ ಇರಲಾರರು. ಆಡಳಿತ, ಶಿಕ್ಷಣ, ಪತ್ರಿಕೆಗಳು, ಮತ್ತು ಪ್ರಸಾರದ ಇತರ ಮಾಧ್ಯಮಗಳೊಳಗೆ ಈ ಸಂಸ್ಥೆ ಪ್ರವೇಶಿಸಲು ಯತ್ನಿಸುತ್ತಿರುವ ಕ್ರಮಬದ್ಧ ವಿಧಾನದ ಬಗ್ಗೆ ಆಳುವ ಪಕ್ಷ ಅಲ್ಲದೆ ವಿರೋಧ ಪಕ್ಷಗಳ ಒಳಗೂ ಇರುವ ಜಾತ್ಯತೀತ ಪ್ರಜಾಪ್ರಭುತ್ವವಾದಿ ಅಂಶಗಳು ಗಮನವನ್ನು ಸೆಳೆಯುತ್ತಿವೆ. ಶಿಕ್ಷಣ ಸಚಿವಾಲಯವೂ ಕೂಡ ಈ ಗುಂಪು ಹೇರಿದ ಒತ್ತಡದಿಂದ ತಪ್ಪಿಸಿಕೊಳ್ಳಲಾಗಲಿಲ್ಲ ಎಂಬುದನ್ನು, ಹಿಂದೂ ಪುನಶ್ಚೇತನವಾದದ ದಾರಿಯನ್ನು ಹಿಡಿಯದೆ ಇದ್ದ ಇತಿಹಾಸದ ಪಠ್ಯಪುಸ್ತಕಗಳನ್ನು ಮುಟ್ಟುಗೋಲು ಹಾಕಿಕೊಂಡ ಅದರ ದುಷ್ಟ ಕೆಲಸದಿಂದ ತಿಳಿದುಕೊಳ್ಳಬಹುದು.

ತಾನು ಒಂದು "ಸಾಮಾಜಿಕ ಮತ್ತು ಸಾಂಸ್ಕೃತಿಕ" ಸೇವಾ ಸಂಸ್ಥೆ ಎಂದು ಆರೆಸ್ಸೆಸ್ ಹೇಳಿಕೊಳ್ಳುವುದು ಗಮನಾರ್ಹವಾಗಿದೆ. ಕರಡು ರಾಷ್ಟ್ರೀಯ ನೀತಿಯಲ್ಲಿ ಶಿಕ್ಷಣದ ಧ್ಯೇಯದ ಬಗ್ಗೆ ಹೇಳಿರುವ "ರಾಷ್ಟ್ರೀಯ ಐಕ್ಯತೆಯನ್ನು, ನಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಹೆಮ್ಮೆಯನ್ನು ಉತ್ತೇಜಿಸುವ" ಕಾರ್ಯದಲ್ಲೇ ತಾನು ನಿಖರವಾಗಿ ನಿರತವಾಗಿದ್ದೇನೆಂದು ಆರೆಸ್ಸೆಸ್ ಹೇಳಿಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಆದ್ದರಿಂದ ವಿವಿಧ ರಾಜ್ಯಗಳ ಶಿಕ್ಷಣ ಇಲಾಖೆಗಳಲ್ಲಿ ಸೇರಿಕೊಂಡಿರುವ ಆರೆಸ್ಸೆಸ್ ಅಂಶಗಳು ಈ ಸರ್ಕಾರಿ ದಾಖಲೆಯನ್ನು ಉಪಯೋಗಿಸಿಕೊಂಡು, ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳ ನಡುವೆ ತನ್ನ "ಶಾಖೆ"ಗಳನ್ನು ಬೆಳೆಸಿಕೊಳ್ಳುವ ಸಾಧ್ಯತೆ ತುಂಬ ಇದೆ.

ನಾವು ಆರೆಸ್ಸೆಸ್ ಅನ್ನು ಉಲ್ಲೇಖಿಸಿದ ಮಾತ್ರಕ್ಕೆ, ಜಾತ್ಯತೀತತೆಗೆ ಅಪಾಯಕಾರಿಯಾಗಿರುವ ಸಂಸ್ಥೆ ಇದೊಂದೇ ಇರುವುದು ಎಂದರ್ಥವಲ್ಲ. ಜಾತ್ಯತೀತತೆಗೆ ವಿರೋಧವಾಗಿರುವ ಕಾರಣಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡಿರುವ ಅನೇಕ ಜಾತಿ ಮತ್ತು ಮತೀಯ ಸಂಸ್ಥೆಗಳು ಬೇಕಾದಷ್ಟಿವೆ. (ಇದರಲ್ಲಿ ಆರೆಸ್ಸೆಸ್ ಬೇರೆ ನೆಲೆಯಲ್ಲಿ ನಿಂತಿದೆ. ದಂಗೆಗಳನ್ನು ಸಂಘಟಿಸುವುದಕ್ಕೆ ಬಳಸಲ್ಪಡುವ ಸೈನ್ಯದೊಡನೆ ಅದು ಅಪಾಯಕಾರಿಯಾದ ಜಾತ್ಯತೀತತೆ ವಿರೋಧಿ ಸಿದ್ಧಾಂತವನ್ನೂ ಅದು ಹರಡುತ್ತದೆ). ಶಿಕ್ಷಣ ಅವಕಾಶಗಳನ್ನು ವಿಸ್ತರಿಸುವುದಷ್ಟೇ ಅಲ್ಲದೆ, ತಮ್ಮ ಜಾತ್ಯತೀತತೆ ವಿರೋಧಿ ಸಿದ್ಧಾಂತವನ್ನು ಹರಡುವುದಕ್ಕೆ ಜಾತೀಯ ಮತ್ತು ಮತೀಯ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳನ್ನು ಬಳಸಿಕೊಳ್ಳದಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ, ಜಿಲ್ಲೆ ಅಥವಾ ಪಂಚಾಯಿತಿ ಸಂಸ್ಥೆಗಳಿಗೆ ಇದೆಯೇ ಎಂಬುದು ಈಗಿನ ಪ್ರಶ್ನೆ.

ಅಲ್ಪಸಂಖ್ಯಾತರ ರಕ್ಷಣೆ:

ಕೋಮುವಾರು ಅಲ್ಪ ಸಂಖ್ಯಾತರು, ಹಿಂದುಳಿದ ವರ್ಗದವರು, ಇವರೆಲ್ಲರಿಗಿಂತ ಹೆಚ್ಚಾಗಿ

ಇ.ಎಂ.ಎಸ್. ನಂಬೂದಿರಿಪಾದ್

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗದವರ ರಕ್ಷಣೆ ಮಾಡುವುದನ್ನು ನಾವೆಲ್ಲರೂ ಬೆಂಬಲಿಸುತ್ತೇವೆ ಎಂಬುದನ್ನು ಮೊದಲು ಸ್ಪಷ್ಟಪಡಿಸುತ್ತೇವೆ. ಪರಿಶಿಷ್ಟಜಾತಿಗಳು ಪರಿಶಿಷ್ಟವರ್ಗದವರು ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇರುವುದು ಸದ್ಯದ ಪರಿಸ್ಥಿತಿಯಲ್ಲಿ ಅಗತ್ಯವಾಗಿದೆ. ಹಾಗೆಯೇ ಬಹುಸಂಖ್ಯಾತ ಕೋಮಿನವರು ನಡೆಸುವ ಆಕ್ರಮಣಗಳಿಂದ ಮತೀಯ ಅಲ್ಪಸಂಖ್ಯಾತರನ್ನು ರಕ್ಷಿಸುವ ವಿಶೇಷ ಕ್ರಮಗಳೂ ಅಗತ್ಯವಾಗಿವೆ. ಆದರೆ ಅಲ್ಪಸಂಖ್ಯಾತ ಕೋಮುಗಳು ಮತ್ತು ಹಿಂದುಳಿದ ಜಾತಿಗಳಿಗೆ ರಕ್ಷಣೆ ನೀಡುವ ವಿಶೇಷ ಕ್ರಮಗಳು, ಶಿಕ್ಷಣದ ಉದ್ದೇಶ ವಿಕೃತಿಗೊಳ್ಳಲು ಅಥವಾ ಶಿಕ್ಷಣ ಸಂಸ್ಥೆಗಳ ಆಡಳಿತ ವ್ಯವಸ್ಥೆ ಪ್ರಜಾಪ್ರಭುತ್ವ ವಿರೋಧಿ ಆಗಲು ಅವಕಾಶ ಕೊಡಬಾರದು.

ಅಲ್ಪಸಂಖ್ಯಾತ ಕೋಮುಗಳು ತಮ್ಮದೇ ಆದ ವಿದ್ಯಾಸಂಸ್ಥೆಗಳನ್ನು "ಸ್ಥಾಪಿಸಿ, ಆಡಳಿತ ನಡೆಸಲು" ಮತ್ತು ರಾಜ್ಯದಿಂದ ಧನಸಹಾಯ ಪಡೆಯಲು ಸಂವಿಧಾನದಲ್ಲಿ ಅವಕಾಶವಿದೆ. ಇದನ್ನು, ಅಧ್ಯಾಪಕರ ನೇಮಕಾತಿ, ಅವರ ಸೇವೆಯ ಸ್ಥಿತಿಗಳ ನಿಯಂತ್ರಣ, ಅವರ ಸಂಬಳ ನೀಡುವುದು ಇವೆಲ್ಲದರ ಮೇಲೆ ಸರ್ಕಾರಕ್ಕೆ ಯಾವುದೇ ಹಿಡಿತ ಇಲ್ಲ ಎಂಬುದಾಗಿ ಅನೇಕ ರಾಜ್ಯಗಳಲ್ಲಿ ವಿವರಿಸಲಾಗಿದೆ. ಕೇರಳದ 1957ರ ಶಿಕ್ಷಣ ಮಸೂದೆಯ ಬಗ್ಗೆ ಈ ಆಧಾರದ ಮೇಲೆ ವಿವಾದವೆಬ್ಬಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಅಧ್ಯಾಪಕರ ನೇಮಕಾತಿ, ಅವರ ಸೇವೆಯ ಖಾಯಂಗೊಳಿಸುವಿಕೆ ಬಗ್ಗೆ ಮತ್ತು ಸಾರ್ವಜನಿಕ ನಿಧಿಯಿಂದ ಪಡೆದುಕೊಂಡ ಅಪಾರ ಹಣವನ್ನು ಆಡಳಿತ ವ್ಯವಸ್ಥೆಯು ತಮ್ಮಿಷ್ಟ ಬಂದಂತೆ ವ್ಯಯಿಸದಿರುವಂತೆ ಕೆಲವು ನಿಯಮಗಳನ್ನು ಮಾತ್ರ ಮಸೂದೆ ಹಾಕಲಿತ್ತು. ಇದನ್ನು "ಅಲ್ಪಸಂಖ್ಯಾತ ವಿರೋಧಿ" ಕ್ರಮ ಎಂದು ಟೀಕಿಸಲಾಯಿತು.

ಆಲಿಘರ್ ಮುಸ್ಲಿಮ್ ವಿಶ್ವವಿದ್ಯಾನಿಲಯದ ಬಗ್ಗೆ ಬಹುವಾಗಿ ಹೇಳುತ್ತಿರುವ "ಅಲ್ಪಸಂಖ್ಯಾತ ಸ್ವರೂಪ"ದ ಬಗ್ಗೆಯೂ ಇಂದು ಇದು ನಿಜವಾಗಿದೆ. ಈಗ ತಿದ್ದುಪಡಿಯಾಗಿರುವ ಹಾಗೆ, ವಿಶ್ವವಿದ್ಯಾನಿಲಯದಲ್ಲಿ ನೀಡಲಾಗುವ ಶಿಕ್ಷಣದ ಸತ್ವ ಮತ್ತು ಇತರ ವಿಶ್ವವಿದ್ಯಾಲಯದ ಅಂಗಗಳ ರಚನೆ ಇವುಗಳಿಗೆ ಸಂಬಂಧಿಸಿದ ಹಾಗೆ ವಿಶ್ವವಿದ್ಯಾಲಯದ ಸ್ಥಾಪಕರು ಯಾವ ವಿಶೇಷ ಅಂಶಗಳನ್ನು ರೂಪಿಸಿದ್ದರೋ ಅದನ್ನು ಈಗಲೂ ಉಳಿಸಿಕೊಳ್ಳಲಾಗಿದೆ ಎಂಬುದನ್ನು ಮಸೂದೆಯನ್ನು ಪರಿಶೀಲಿಸುವ ಯಾವುದೇ ಪೂರ್ವಗ್ರಹವಿಲ್ಲದ ವ್ಯಕ್ತಿ ಹೇಳಬಹುದು. ಆಲಿಘರ್ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಹಾಗೆ ಮುಸ್ಲಿಮ್ ಜನಾಂಗವು ಸಾಂಪ್ರದಾಯಿಕವಾಗಿ ಅನುಭವಿಸುತ್ತಿದ್ದ ವಿಶೇಷ ಹಕ್ಕುಗಳನ್ನು ಈಗಲೂ ಅನುಭವಿಸುತ್ತದೆ ಎಂಬುದನ್ನು ಗಮನಿಸಬಹುದು.

ಆಲಿಘರ್ ವಿಶ್ವವಿದ್ಯಾಲಯ:

ಸಾರ್ವಜನಿಕ ನಿಧಿಯಿಂದ ಪಡೆದುಕೊಂಡ ಅಪಾರ ಹಣವನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ಮನಬಂದಂತೆ ಖರ್ಚುಮಾಡುವುದರ ಮೇಲೆ ಸರ್ಕಾರದ ರೂಪದಲ್ಲಿ ಕಾರ್ಯನಿರ್ವಹಿಸುವ ಸಮಾಜಕ್ಕೆ ಯಾವುದೇ ಅಧಿಕಾರವಿಲ್ಲ ಎಂಬರ್ಥವನ್ನು ಅದು ಅಲ್ಪಸಂಖ್ಯಾತ ಸಂಸ್ಥೆ ಎಂಬುದು ತರುತ್ತಿತ್ತು. ಆದರೆ ಅದು ಅಲ್ಪಸಂಖ್ಯಾತ ಸಂಸ್ಥೆ ಎಂಬ ಮಸೂದಾತ್ಮಕ ಘೋಷಣೆಯನ್ನು ಮಾತ್ರ ಈಗ ರದ್ದುಪಡಿಸಲಾಗಿದೆ. ಅಲ್ಲದೆ ಅಲ್ಪಸಂಖ್ಯಾತ ಸ್ವರೂಪ ಬೇಕು ಎಂಬುದನ್ನು ಕೇಳಿದರೆ, ಅಧ್ಯಾಪಕರು ಮತ್ತು ಶಿಕ್ಷಕೇತರ ಸಿಬ್ಬಂದಿಯ ನೇಮಕಾತಿ, ಸೇವಾಸ್ಥಿತಿಗತಿಗಳ ಬಗ್ಗೆ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ವಿಪರೀತ ಹಕ್ಕನ್ನು ಕೊಟ್ಟಂತಾಗುತ್ತದೆ. ಅಲ್ಲದೆ ವಿದ್ಯಾರ್ಥಿಗಳ ಪ್ರವೇಶ ಮತ್ತು ವರ್ತನೆಯ ಬಗ್ಗೆ ಧಾರ್ಮಿಕ ಮತ್ತು ರಾಜಕೀಯ ಆಧಾರದ ಮೇಲೆ ಪಕ್ಷಪಾತವಾಗುವಂತಹ ನಿಯಮಗಳನ್ನು ಹಾಕಲೂ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಹಕ್ಕು ನೀಡಿದಂತಾಗುತ್ತದೆ. ಸಂಸ್ಥೆಯನ್ನು ಹಿಡಿತದಲ್ಲಿಟ್ಟುಕೊಳ್ಳುವ ಸಣ್ಣ ಗುಂಪೊಂದು ತನ್ನಿಷ್ಟ ಬಂದಹಾಗೆ ವರ್ತಿಸಲು ವಿಶ್ವವಿದ್ಯಾಲಯವನ್ನು ಸಾಧನವನ್ನಾಗಿ ಮಾಡಿಕೊಳ್ಳಲು ಮತ್ತು "ಭಾರತದ ಮುಸ್ಲಿಮರ" ಹೆಸರಿನಲ್ಲಿ ಹಾಗೆ ಕೆಲಸ ಮಾಡಲು ಇದರಿಂದ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಅವಕಾಶ ಕೊಟ್ಟಂತಾಗುತ್ತದೆ.

ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ, ಬಹುಸಂಖ್ಯಾತ ಕೋಮಿನ ಸಿದ್ಧಾಂತಕ್ಕೆ ಬದ್ಧವಾದ ಶಕ್ತಗುಂಪು, ಅಲ್ಪಸಂಖ್ಯಾತರ ನ್ಯಾಯಬದ್ಧ ಹಕ್ಕುಗಳಿಗೆ ಧಕ್ಕೆ ಮಾಡಬಹುದು ಮತ್ತು ಮಾಡುತ್ತಿದೆ ಎಂದು ಅಲ್ಪಸಂಖ್ಯಾತರು ಭಾವಿಸುವುದನ್ನು ನಾವು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುತ್ತೇವೆ. ಆದರೆ ಬಹುಸಂಖ್ಯಾತ ಕೋಮಿನ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಸಣ್ಣ ಗುಂಪಿನ ಮತಾಂಧತೆಯ ವಿರುದ್ಧ ಹೋರಾಡಲು ಸಿದ್ಧವಾಗಿವೆ ಮತ್ತು ತಮ್ಮ ನ್ಯಾಯಬದ್ಧ ಹಕ್ಕುಗಳನ್ನು ಪಡೆದುಕೊಳ್ಳುವ ವಿಚಾರದಲ್ಲಿ ಅಲ್ಪಸಂಖ್ಯಾತ ಕೋಮುಗಳ ಜೊತೆ ಸಂಪೂರ್ಣವಾಗಿ ಸಹಕರಿಸುತ್ತವೆ. ಆದರೆ ಅಲ್ಪಸಂಖ್ಯಾತ ಕೋಮಿನ ಹಕ್ಕುಗಳ ರಕ್ಷಣೆಯ ಹೆಸರಿನಲ್ಲಿ, ವಿದ್ಯಾಸಂಸ್ಥೆಗಳ ಹಿಡಿತಕ್ಕಾಗಿ, ಸಣ್ಣ ಗುಂಪುಗಳು ಹಿತೂರಿಗೆ ತಮ್ಮನ್ನು ಬಳಸಿಕೊಳ್ಳಲು ಅಲ್ಪಸಂಖ್ಯಾತ ಜನತೆ ಅವಕಾಶ ಕೊಟ್ಟರೆ, ಅಲ್ಪಸಂಖ್ಯಾತ ಕೋಮಿನೊಳಗೇ ಇರುವ ಜಾತ್ಯತೀತ ಪ್ರಜಾಪ್ರಭುತ್ವವಾದಿ ಅಂಶಗಳಿಗೆ ಪೆಟ್ಟುಬೀಳುತ್ತದೆ.

ರಹಸ್ಯ ಅಂಶ:

ಅಲ್ಪಸಂಖ್ಯಾತರು ತಮ್ಮದೇ ಆದ ಶಿಕ್ಷಣಸಂಸ್ಥೆಗಳನ್ನು "ಸ್ಥಾಪಿಸಿ ಆಡಳಿತ ನಡೆಸುವ" ಹಕ್ಕಿನ ಬಗ್ಗೆ ನಡೆಯುತ್ತಿರುವ ವಿವಾದವು, ಈ ಸ್ವಾತಂತ್ರ್ಯಾನಂತರದ ಮೂವತ್ತೆರಡು ವರ್ಷಗಳಲ್ಲಿಯೂ ಜಾತ್ಯತೀತ, ವೈಜ್ಞಾನಿಕ ಮತ್ತು ಆಧುನಿಕ ಶಿಕ್ಷಣಕ್ಕೆ ಹೊಸ ತಿರುವು ಕೊಡಲಾಗಿಲ್ಲವೆಂಬ ಅಂಶವನ್ನು ಮರೆಮಾಚಲು ಸಹಾಯ ಮಾಡುತ್ತದೆ. ಪ್ರಾಥಮಿಕ ಶಿಕ್ಷಣವನ್ನು ಸಾರ್ವಜನಿಕವಾಗಿಸುವಂತೆ ಮತ್ತು ಶಿಕ್ಷಣದ ಉನ್ನತ ಹಂತಗಳಲ್ಲಿ ಶೀಘ್ರ ಪ್ರಗತಿಗಳನ್ನು ತರುವಂತೆ ದೇಶದ ಶಿಕ್ಷಣವನ್ನು ಯೋಜಿಸುವುದರ ಬಗ್ಗೆ ತಾನು ಅಷ್ಟೇನೂ ಆಸಕ್ತವಾಗಿಲ್ಲವೆಂಬುದನ್ನು 32 ವರ್ಷಗಳ ಕಾಂಗ್ರೆಸ್ ಆಡಳಿತ ತೋರಿಸಿಕೊಂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮತ್ತು ಕೆಳಹಂತಗಳ ಚುನಾಯಿತ ಜನಪ್ರಿಯ ಸಂಸ್ಥೆಗಳು, ದೇಶದ ಶಿಕ್ಷಣದ ವಿಚಾರದಲ್ಲಿ ತಮ್ಮ ಪ್ರಾಥಮಿಕ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ವಿಫಲವಾದಿವೆ.

ಎರಡು ವರ್ಷಗಳ ಜನತಾ ಆಡಳಿತವು ತಾನು ಕಾಂಗ್ರೆಸ್ ಆಡಳಿತಕ್ಕಿಂತ ಉತ್ತಮವಲ್ಲವೆಂದು ತೋರಿಸಿಕೊಂಡಿದೆ. ಖಾಸಗಿ ವ್ಯಕ್ತಿಗಳು ಮತ್ತು ಗುಂಪುಗಳು ತಮ್ಮಿಷ್ಟ ಬಂದಹಾಗೆ ವಿದ್ಯಾಸಂಸ್ಥೆಗಳನ್ನು ನಡೆಸುವುದಕ್ಕೆ ಅವಕಾಶ ಕೊಡುವುದನ್ನು ಬಿಟ್ಟರೆ ಅವರಿಗೆ ಬೇರೆ ಯೋಜನೆಯೇ ಇಲ್ಲ. ಇದಕ್ಕೆ ಅಲ್ಪಸಂಖ್ಯಾತರ ಹಕ್ಕುಗಳನ್ನು, ಕೇವಲ ಒಂದು ನೆಪವಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ.

ಸಂಸತ್ತು ಮತ್ತು ಯೋಜನೆ

(4ನೇ ಪುಟದಿಂದ)

ವುದು ಎಂದರ್ಥವಲ್ಲ. ಜನತೆಯು ಕ್ರಮಬದ್ಧವಾಗಿ ಸಂಘಟಿತರಾಗಿ, ತಮ್ಮ ಅಗತ್ಯಗಳು ಮತ್ತು ಆಸೆಗಳನ್ನು ಯೋಜನೆಗಳಲ್ಲಿ ಸೇರಿಸಲು ಆ ಮೂಲಕ ಶಕ್ತರಾದಾಗ ಮಾತ್ರ, ಜನತೆಯು ಭಾಗವಹಿಸಿರುವ ಕೆಳಹಂತದ ಯೋಜನೆ ಗ್ರಾಮೀಣ ಬಡವರ ಹಿತಾಸಕ್ತಿಗಳನ್ನು ಮೇಲೆತ್ತಬಲ್ಲದು. ಈ ದಾರಿಯಲ್ಲಿ ಮಾತ್ರ ಯೋಜನಾ ವಿಧಾನದ ಅಧಿಕಾರ ಕೇಂದ್ರವನ್ನು ಗ್ರಾಮೀಣ ಬಡವರ ಪರವಾಗಿ ತಿರುಗಿಸಬಹುದು. ಸಮಾನಾಂಶವುಳ್ಳ ಮತ್ತು ಅಂತರಿಕವಾಗಿ ಸಮತೂಕವನ್ನುಳ್ಳ ಕೆಳಹಂತದ ಯೋಜನೆಗಳನ್ನುಳ್ಳ ಸಮಗ್ರ ಸ್ವರೂಪವನ್ನು ತರಬೇಕಾದರೆ, ಕರಡು ಯೋಜನೆಯನ್ನು ಅಂಗೀಕರಿಸುವಾಗ ಈ ಮುಖ್ಯವಾದ ಮತ್ತು ಅತಿ ಗಮನಾರ್ಹವಾದ ಅಂಶಗಳನ್ನು ನಮ್ಮ ಸಂಸತ್ತು ಗಮನದಲ್ಲಿರಿಸಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

●

ಆರ್ಥಿಕ ಸಮೀಕ್ಷೆ :

(3ನೇ ಪುಟದಿಂದ)

ಅಲ್ಲದೆ, 1978-79ರಲ್ಲಿ ವಿಶೇಷ ಹಣಕಾಸು ನಿಗಮಗಳಿಗೆ ರಿಸರ್ವ್ ಬ್ಯಾಂಕ್ ರೂ. 295 ಕೋಟಿ ನೇರವಾಗಿ ಸಾಲಕೊಟ್ಟಿತು. ಹಿಂದಿನ ವರುಷ ಈ ಸಾಲದ ಮೊತ್ತ ಕೇವಲ ರೂ. 50 ಕೋಟಿಯಾಗಿತ್ತು. ಬ್ಯಾಂಕುಗಳು ಸಾಲ ನೀಡುವಾಗ ರಿಸರ್ವ್ ಬ್ಯಾಂಕಿನ ಆದೇಶಗಳನ್ನೂ, ಉತ್ಪಾದನೆ ಹಾಗೂ ಉದ್ಯೋಗಗಳ ಹೆಚ್ಚಳದ ಗುರಿಯನ್ನು ಸಂಪೂರ್ಣವಾಗಿ ಅಲಕ್ಷಿಸಿದವು. ಭಾರೀ ವ್ಯಾಪಾರಿಗಳ ಒತ್ತಾಯ ವಶೀಲಿ ಎಷ್ಟೆಂದರೆ, ಅವರಿಗೆ ನೀಡುವ ಸಾಲಗಳ ಮೇಲೆ ರಾಷ್ಟ್ರೀಕೃತ ಬ್ಯಾಂಕುಗಳ ಛೇರ್‌ಮೆನ್‌ಗಳಿಗೇ ಮಾಹಿತಿಯಾಗಲೀ ನಿಯಂತ್ರಣವಾಗಲೀ ಇರುತ್ತಿರಲಿಲ್ಲ !

ಬೆಲೆಏರಿಕೆ ಮತ್ತು ಗುತ್ತೇದಾರಿ ಕೈಗಾರಿಕೆಗಳು :

1978-79ರಲ್ಲಿ ಆರ್ಥಿಕ ಕುಸಿತ ಸ್ವಲ್ಪ ಮಟ್ಟಿಗೆ ನೀಗಿ, ಜನರ ಬೇಡಿಕೆಗಳು ಹೆಚ್ಚಾಗುತ್ತಿದ್ದಂತೆ ಕೈಗಾರಿಕೆಗಳ ಉತ್ಪಾದನಾ ಸಾಮರ್ಥ್ಯದ ಬಳಕೆಯಲ್ಲಿ ಸಾಕಷ್ಟು ಪ್ರಗತಿಯಾಗುತ್ತಿದ್ದಂತೆ, ಗುತ್ತೇದಾರಿ ಕೈಗಾರಿಕೆಗಳು ತಮ್ಮ ವಸ್ತುಗಳ ಬೆಲೆಏರಿಸಿ ಭಾರೀ ಲಾಭಗಳಿಸಲು ಭರದಿಂದ ಪ್ರಯತ್ನಿಸುತ್ತಿವೆ. ಸಕ್ಕರೆ ಮತ್ತು ಬಟ್ಟೆಗಳ ಎರಡೇ ಉದಾಹರಣೆಗಳು ಸಾಕು. ಕಬ್ಬಿನ ಬೆಳೆಯು ಹೆಚ್ಚಿ ಕಬ್ಬು ಬೆಳೆಗಾರರು ಯೋಗ್ಯ ಬೆಲೆಗಳು ದೊರಕದೆ ಹತಾಶರಾಗುತ್ತಿದ್ದಂತೆ, ಸಕ್ಕರೆ ಉತ್ಪಾದನೆಯು ಹೆಚ್ಚಿದರೂ ಅದರ ಬೆಲೆಯು ಇಳಿಮುಖವಾಗುವ ಬದಲು ಏರುತ್ತಿರುವುದು ವಿಷಾದಕರವಾಗಿದೆ. ಅಧಿಕ ಉತ್ಪಾದನೆಯ ಪ್ರಯೋಜನ ಗ್ರಾಹಕರಿಗೆ ಸಿಗಲೆಂದು ಸಕ್ಕರೆ ನಿಯಂತ್ರಣವನ್ನು ಕಳೆದ ವರುಷ ತೆಗೆದುಹಾಕಲಾಯಿತು. ಮುಕ್ತ ಮಾರುಕಟ್ಟೆಯ ಬೆಲೆ ಕೆ. ಜಿ. ಗೆ ರೂ. 2-60 ಕ್ಕಿಂತ ಹೆಚ್ಚಾದರೆ, ಸರಕಾರ ಹಸ್ತಕ್ಷೇಪಮಾಡುವುದೆಂದು ಆಶ್ವಾಸನೆ ನೀಡಿತ್ತು. ಆದರೆ ಗುತ್ತೇದಾರಿ ಕೈಗಾರಿಕಾಗಾರರು ಸಕ್ಕರೆಯ ಮುಕ್ತ ವ್ಯಾಪಾರದಿಂದ ಬೆಲೆ ಕುಸಿಯಬಾರದೆಂದು ಮಾರುಕಟ್ಟೆಗೆ ಸಕ್ಕರೆಯ ಸರಬರಾಜನ್ನು ನಿಯಂತ್ರಿಸತೊಡಗಿದರು, ಇದರಿಂದ ಈಗಾಗಲೇ ಸಕ್ಕರೆ ಬೆಲೆಯು ಕೆ. ಜಿ. ಗೆ ರೂ. 3-20 ಕ್ಕೇರಿದೆ. !

ಹಾಗೆಯೇ, ಹತ್ತಿ ಬೆಳೆ ಹೆಚ್ಚಿ ಬೆಳೆಗಾರರು ಬೆಲೆ ಕುಸಿತದಿಂದಾಗಿ ಕಷ್ಟನಷ್ಟಗಳಿಗೆ ಒಳಗಾಗುತ್ತಿದ್ದರೂ, ಹತ್ತಿಬಟ್ಟೆ ಉತ್ಪಾದನೆಯ ವೆಚ್ಚದಲ್ಲಿ ಹತ್ತಿಬೆಲೆಯು ಶೇ. 50 ರಷ್ಟಿದ್ದರೂ, ಬಟ್ಟೆ ಬೆಲೆ ಏರುತ್ತಲೇ ಇದೆ. ಹತ್ತಿಬಟ್ಟೆ ಬೆಲೆಗಳನ್ನು ಶೇ. 10ರಷ್ಟು ಇಳಿಸಬೇಕೆಂಬ ಸರಕಾರದ ಬೇಡಿಕೆಯನ್ನು ಗಿರಣಿ ಮಾಲೀಕರು 3-4 ತಿಂಗಳುಗಳಿಂದ ಯಶಸ್ವಿಯಾಗಿ ಮುಂದೂಡುತ್ತಾ ಬಂದರು. ಹಬ್ಬ ಮತ್ತು ಮದುವೆ ಅವಧಿ ಮುಗಿಯುತ್ತಾ ಬರುವಾಗ, ಈಗ ಬಟ್ಟೆ ಬೆಲೆಯಲ್ಲಿ ಸ್ವಲ್ಪ ಕಡಿತ ಹೇರಿದ್ದರಿಂದ ಗ್ರಾಹಕರಿಗೇನೂ ಲಾಭವಾಗಲಾರದು. ಅವರಿಗೆ ಅದು ತಿಳಿಯುವುದಾದರೂ ಹೇಗೆ ? ವ್ಯಾಪಾರಿಗಳು, ದಳ್ಳಾಳಿಗಳು ಇದರ ಲಾಭ ಪಡೆಯುವರು. ಗಿರಣಿ ಮಾಲೀಕರು ಬಟ್ಟೆ ಬೆಲೆ ಏರಿಸಲು ಸರಕಾರವನ್ನು ಒತ್ತಾಯಿಸುತ್ತಿದ್ದಾರೆ. ಕಾರಣ, ಇತ್ತೀಚೆಗೆ ಗಿರಣಿ ಕಾರ್ಮಿಕರ ವೇತನ ಹೆಚ್ಚಳದ ಭಾರವನ್ನು ಗ್ರಾಹಕರ ಹೆಗಲಿಗೇ ಏರಿಸುವುದಾಗಿದೆ. ಹೀಗೆಯೇ, ಕಾಗದ, ಸಿಮೆಂಟ್, ಚರ್ಮ, ರಬ್ಬರ್, ರಾಸಾಯನಿಕ, ಲೋಹ, ಯಂತ್ರಸಾಮಗ್ರಿ, ವಾಹನಸಾಮಗ್ರಿ, ಮುಂತಾದ ಅಗತ್ಯವಾದ ಕೈಗಾರಿಕಾ ವಸ್ತುಗಳಿಗೆ ಗುತ್ತೇದಾರಿಗಳು ಬೆಲೆ ಏರಿಸುವ ಸರ್ವಪ್ರಯತ್ನ ನಡೆಸುತ್ತಿದ್ದಾರೆ. ಅವರು ಉತ್ಪಾದನೆಯಲ್ಲಿ ಮತ್ತು ಮಾರೈಕೆಯಲ್ಲಿ ಗುಪ್ತವಾಗಿ ನಡೆಸುವ ನಿಯಂತ್ರಣ, ಮುಷ್ಕರ ಜನಸಾಮಾನ್ಯರಿಗೆ ತಿಳಿಯುವುದಿಲ್ಲ. ವೇತನ ಹೆಚ್ಚಳಕ್ಕಾಗಿ ನಡೆಯುವ ಕಾರ್ಮಿಕರ ಮುಷ್ಕರಗಳು ಮಾತ್ರ ಭಾರೀ ಪ್ರಚಾರ ಪಡೆಯುವುವು.

ದುಡಿಯುವ ಜನರ ಮೇಲೆ ಪ್ರಹಾರಗಳು :

ಬೆಲೆಏರಿಕೆ, ಹಣದುಬ್ಬರವನ್ನು ತಡೆಯಲು ಯೋಜನಾಆಯೋಗ, ಕೇಂದ್ರ, ಮಂತ್ರಿಮಂಡಳಿ, ಮತ್ತಿತರರು ಪುನಃ ಕಾರ್ಯನಿರತರಾಗಿದ್ದಾರೆ. ಎಲ್ಲರೂ ಅದರ ಕುರಿತು ಕಾತುರಪಡುವವರೇ ! ಹಣದ ಚಲಾವಣೆಯ ಹೆಚ್ಚಳದಲ್ಲಿ ನಿಯಂತ್ರಣ. ಬ್ಯಾಂಕು ಸಾಲಗಳ ಮೇಲೆ ನಿಯಂತ್ರಣ, ಸಾಲಗಳ ಬಡ್ಡಿಯಲ್ಲಿ ಏರಿಕೆ ಅನುತ್ಪಾದಿತ ಹಾಗೂ ಅನಭಿವೃದ್ಧಿಯ ಸಾರ್ವಜನಿಕ ವೆಚ್ಚದಲ್ಲಿ ಕಡಿತ, ಉತ್ಪಾದನೆ ಮತ್ತು ಉದ್ಯೋಗಗಳ ಹೆಚ್ಚಳಕ್ಕೆ ಆದ್ಯತೆ, ವಿದೇಶ ವಿನಿಮಯ ಮತ್ತು ಆಹಾರ ಧಾನ್ಯಗಳ ಸಂಗ್ರಹಣೆಗಳನ್ನು ಉತ್ಪಾದನೆ ಹಾಗೂ ಉದ್ಯೋಗಗಳ ಹೆಚ್ಚಳಕ್ಕೆ ಬಳಸುವುದು ಜೀವನಾವಶ್ಯಕ ವಸ್ತುಗಳ ಸಮರ್ಪಕವಾದ ಸಾರ್ವಜನಿಕ ವಿತರಣೆ, ಇತ್ಯಾದಿ ಪರಿಹಾರ ಯೋಜನೆಗಳು ಪುನಃ ಚರ್ಚಿಸಲ್ಪಡುತ್ತಿವೆ. ಇವೆಲ್ಲವುಗಳೂ ಈ ಹಿಂದೆ ವಿಫಲವಾಗಿರುವುದು ನಿಮಗೆ ಈಗಾಗಲೇ ತಿಳಿದಿದೆ. ಕಾರಣ ನಮ್ಮ ಯೋಜನೆಯು ಆರ್ಥಿಕ ರಂಗದ ಎಲ್ಲಾ ಕ್ಷೇತ್ರಗಳಲ್ಲಿ ಉತ್ಪಾದನೆಯಿಂದ ವಿತರಣೆಯವರೆಗೆ ಕಟ್ಟುನಿಟ್ಟಾದ ನಿಯಂತ್ರಣ ವಿಧಿಸಲಾರದು. ಮೂಲಭೂತವಾಗಿ ಬಂಡವಾಳಶಾಹಿಗಳಿಗೂ, ವ್ಯಾಪಾರಸ್ಥರಿಗೂ, ಭೂಮಾಲಕರಿಗೂ ಅನುಕೂಲವಾಗುವಷ್ಟೇ ಸರಕಾರದ ನಿಯಂತ್ರಣವಿರುವುದು. ಹೀಗಾಗಿ, ಆರ್ಥಿಕ ಅಭಿವೃದ್ಧಿಗೆ ಬಂಡವಾಳ ಸಂಗ್ರಹಿಸುವಾಗಲೂ, ಅದನ್ನು ವಿನಿಯೋಗಿಸುವಾಗಲೂ ಬೆಲೆ ಏರಿಕೆ, ಹಣದುಬ್ಬರ ಅನಿವಾರ್ಯವಾಗಿದೆ. ಪರಿಣಾಮವಾಗಿ ಆದಾಯ ಸಂಪತ್ತುಗಳ ಅಸಮಾನತೆಯೂ ಅನಿವಾರ್ಯವಾಗಿದೆ, ಶೋಷಣೆಯೂ ಅನಿವಾರ್ಯವಾಗಿದೆ. ಅದರ ವಿರುದ್ಧ ಹೋರಾಡುವ ದುಡಿಯುವ ಜನರ ಮೇಲೆ ಹೇರುವ ಪ್ರಹಾರಗಳೂ ಅನಿವಾರ್ಯವಾಗಿವೆ !

ಸಹಜವಾಗಿಯೇ, ಸದ್ಯದ ಪರಿಸ್ಥಿತಿಯು 1973-74ರ ಕರಾಳಪರಿಸ್ಥಿತಿಯ ನೆನಪು ಕೊಡುತ್ತಿದೆ. ಆಗ, ಬೆಲೆ ಏರಿಕೆ, ಹಣದುಬ್ಬರವನ್ನು ತಡೆಯಲು, ವೇತನ ಸ್ಥಗಿತ, ಮುಷ್ಕರ ಮುರಿಯುವುದು, ಇತ್ಯಾದಿ ದೌರ್ಜನ್ಯಗಳಿಂದ ಆರಂಭವಾದ ಪರಿಹಾರೋಪಾಯಗಳು ಮುಂದೆ ಆಂತರಿಕ ತುರ್ತುಪರಿಸ್ಥಿತಿಯನ್ನು ಹೇರಿ ಪ್ರಜಾಪ್ರಭುತ್ವವನ್ನೇ ಕಸಿದುಕೊಳ್ಳುವುದರಲ್ಲಿ ಪರಿಸಮಾಪ್ತಿಯಾಯಿತು. ಈಗಲೂ ಇತ್ತೀಚೆಗೆ ನಡೆದ ಕೇಂದ್ರ ಮಂತ್ರಿಮಂಡಳಿಯ ತುರ್ತುಸಭೆಯಲ್ಲಿ ಬೆಲೆಏರಿಕೆ, ಹಣದುಬ್ಬರವನ್ನು ತಡೆಗಟ್ಟಲು, ಇತರ ಕಾರ್ಯಕ್ರಮಗಳೊಂದಿಗೇ, ಮುಷ್ಕರಗಳನ್ನು ನಿಷೇಧಿಸುವುದು, ಕಾರ್ಮಿಕರ ಮತ್ತು ನೌಕರರ (ಮುಖ್ಯವಾಗಿ ಸಾರ್ವಜನಿಕ ಕ್ಷೇತ್ರದ) ಮೇಲೆ ಸಾವಕಾಶ ಕೆಲಸದ ವಿರುದ್ಧ ಕಠಿಣ ಶಿಸ್ತುಕ್ರಮ ಕೈಕೊಳ್ಳುವುದು, ವೇತನ ಸ್ಥಗಿತಗೊಳಿಸುವುದು ಮುಂತಾದ ಕಾರ್ಯಕ್ರಮಗಳನ್ನೂ ಚರ್ಚಿಸಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ (3.6.79)ನಲ್ಲಿ ವರದಿಯಾಗಿದೆ. ಇದನ್ನು ಗಂಭೀರವಾಗಿ ಗಮನಿಸಬೇಕು. ಈಗಾಗಲೇ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನ ಮೂಲಕ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಕಾರ್ಮಿಕರ ಮತ್ತು ನೌಕರರ ವೇತನ ಹೆಚ್ಚಳಕ್ಕೆ ಭಾರೀ ಅಡೆತಡೆಗಳನ್ನು ಒಡ್ಡಲಾಗುತ್ತಿದೆ. ಕೈಗಾರಿಕಾ ಸಂಬಂಧಗಳ ಮಸೂದೆಯು ಕಾರ್ಮಿಕರ ಸಂಘಟನಾ ಸ್ವಾತಂತ್ರ್ಯವನ್ನೂ, ಮುಷ್ಕರ ಹೂಡುವ ಮತ್ತು ಚೌಕಾಶಿ ಮಾಡುವ ಹಕ್ಕುಗಳನ್ನೂ ಮೊಟಕು ಮಾಡಲು ಉದ್ದೇಶಿಸಿದೆ. ಯೋಜನಾ ಆಯೋಗವು ರೈಲ್ವೆ, ಅಂಚೆ ತಂತಿ, ಮತ್ತಿತರ ನೌಕರರಿಗೆ ಬೋನಸ್ ಕೊಡುವುದನ್ನು ವಿರೋಧಿಸುತ್ತಿದೆ. ಕೊಟ್ಟರೂ, ಅದನ್ನು ಪ್ರೋವಿಡೆಂಟ್ ಫಂಡಿಗೇ ಸೇರಿಸಲು ಸಲಹೆ ಮಾಡುತ್ತಿದೆ. ಮಂತ್ರಿಮಂಡಳಿಯ ಬಹುಭಾಗ ಸದಸ್ಯರೂ ಬೋನಸ್ ನೀಡುವಿಕೆಯನ್ನು ವಿರೋಧಿಸುತ್ತಿದ್ದಾರೆ. ಇದರಿಂದ ಸರಕಾರಕ್ಕೆ ರೂ. 600 ಕೋಟಿ ವರುಷಕ್ಕೆ ಹೆಚ್ಚು ವೆಚ್ಚವಾಗುವುದೆಂದೂ ಅದು ಬೆಲೆ ಏರಿಕೆ, ಹಣದುಬ್ಬರಕ್ಕೆ ಕಾರಣವಾಗುವುದೆಂದೂ ಅವರ ವಾದ. ದುಡಿಯುವ ಜನರಲ್ಲಿ ಹಣದ ಚಲಾವಣೆಯ ನಿಯಂತ್ರಣದಿಂದ ಬೆಲೆ ಏರಿಕೆ, ಹಣದುಬ್ಬರವನ್ನು ನಿವಾರಿಸಲು ಇವರು ಹೊರಟಿದ್ದಾರೆ. ದುಡಿಯುವ ಜನರಲ್ಲಿ ಹಣದ ಚಲಾವಣೆಯಿಂದ ಅವರ ಗ್ರಾಹಕ ಶಕ್ತಿಯು ಹೆಚ್ಚಿ, ಅವಶ್ಯಕವಸ್ತುಗಳಿಗೆ ಬೇಡಿಕೆಗಳು ಹೆಚ್ಚಿ ಆರ್ಥಿಕ ಅಭಿವೃದ್ಧಿಗೆ ಪ್ರಚೋದನೆಯಾಗುವುದೆಂಬ ಸತ್ಯಕ್ಕೆ ಇವರು ಕಣ್ಣುಮುಚ್ಚುವರು. ಕಾರಣ ಅನಭಿವೃದ್ಧಿಗಾಗಿ ಅನುತ್ಪಾದಿತ ವಿಷಯಗಳಿಗಾಗಿ ಸರಕಾರದ ಮತ್ತು ಶ್ರೀಮಂತ ವರ್ಗದವರ ವೆಚ್ಚವನ್ನು ಅವರಲ್ಲಿರುವ ಹಣದ ಚಲಾವಣೆಯ ಹೆಚ್ಚಳವನ್ನು ನಿಯಂತ್ರಿಸಲು ಅವರು ಅಸಮರ್ಥರಾಗಿದ್ದಾರೆ. ಹುಲಿ ತನ್ನ ಘಾಯವನ್ನು ಮುಚ್ಚಲು ಇನ್ನೊಂದು ಘಾಯ ಮಾಡಿಕೊಂಡಂತೆ, ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು ಒಂದು ರೋಗವನ್ನು ಗುಣಪಡಿಸುವುದಕ್ಕೆ ಇನ್ನೊಂದು ಗಂಡಾಂತರವನ್ನು ತಂದುಕೊಳ್ಳುತ್ತಿದೆ. ದುಡಿಯುವ ಜನರನ್ನು ಬಲಿಗೊಡುತ್ತಿದೆ. ಕಾರಣ ದುಡಿಯುವ ಜನರು ಸಂಘಟಿತರಾಗಿ ಸದಾ ಜಾಗರೂಕರಾಗಿ ತಮ್ಮ ನೆಲೆಯನ್ನು ಭದ್ರ ಮಾಡಿಕೊಂಡು ರೋಗಗ್ರಸ್ಥ ವ್ಯವಸ್ಥೆಯನ್ನು ಕೊನೆಗಾಣಿಸಲು ಹೋರಾಡಬೇಕಾಗಿದೆ.

○

ಸಲಹಾ ಸಮಿತಿ ರಚನೆ ಖಂಡನಾರ್ಹ

ಕೊಡಗು ಜಿಲ್ಲಾ, ವಿರಾಜಪೇಟೆಯ ಪುರಸಭೆಗೆ ಮೇ 27ರಂದು ಚುನಾವಣೆ ನಡೆಯಬೇಕಾಗಿತ್ತು. ಈ ಸಂದರ್ಭದಲ್ಲಿ ಇಂದಿರಾ ಕಾಂಗ್ರೆಸ್‌ನಲ್ಲಿರುವ ಗುಂಪುಗುಳಿತನ ಬಹಿರಂಗವಾಯಿತು. ಕೆಲವು ಅತೃಪ್ತ ಕಾಂಗ್ರೆಸ್ಸಿಗರು ಸ್ವತಂತ್ರರಾಗಿ ಸ್ಪರ್ಧಿಸಿದ್ದರು. ಇಂದಿರಾ ಕಾಂಗ್ರೆಸ್ಸಿನೊಳಗಿನ ಯಾದವೀ ಕಲಹದಿಂದ ಅದು ಪೂರ್ಣಪರಾಭವ ಹೊಂದುವುದು ನಿಶ್ಚಿತವಾಗಿತ್ತು.

ಈ ಪರಿಸ್ಥಿತಿಯಲ್ಲಿ ಚುನಾವಣೆಗೆ ನ್ಯಾಯಾಲಯದಿಂದ ತಡೆಯಾಜ್ಞೆ ಬಂದದ್ದು ಇಂದಿರಾ ಕಾಂಗ್ರೆಸ್ಸಿಗರಿಗೆ ವರದಾನದಂತಾಗಿದೆ. ಈ ತಡೆಯಾಜ್ಞೆಯನ್ನು ಶೀಘ್ರದಲ್ಲೇ ರದ್ದುಪಡಿಸಿ ಚುನಾವಣೆ ನಡೆಯುವಂತೆ ಮಾಡುವುದು ಸರಕಾರದ ಕರ್ತವ್ಯವಾಗಿದೆ. ಆದರೆ ಈ ಬಗ್ಗೆ ಆಸಕ್ತಿವಹಿಸುವುದಕ್ಕೆ ಬದಲಾಗಿ ಸರಕಾರ ತಡೆಯಾಜ್ಞೆಯನ್ನು ನೆಪವಾಗಿ ಮಾಡಿ ಸಲಹಾ ಸಮಿತಿಯೊಂದನ್ನು ವಿರಾಜಪೇಟೆಯ ಪುರಜನರ ಮೇಲೆ ಹೇರಿದೆ.

ತಡೆಯಾಜ್ಞೆಯನ್ನು ಶೀಘ್ರದಲ್ಲೇ ರದ್ದುಗೊಳಿಸಲು ಕ್ರಮ ಕೈಗೊಂಡು ಪ್ರಜಾಪ್ರಭುತ್ವ ಕ್ರಮದಲ್ಲಿ ಚುನಾವಣೆ ನಡೆಸಿ ಜನತೆಯ ಚುನಾಯಿತ ಪ್ರತಿನಿಧಿಗಳ ಕೈಯಲ್ಲಿ ಅಧಿಕಾರ ನೀಡುವುದಕ್ಕೆ ಬದಲಾಗಿ ಇಂದಿರಾ ಕಾಂಗ್ರೆಸ್ಸಿಗರನ್ನು ಜನತೆಯ ಮೇಲೆ ಹೇರಲು ಸರಕಾರ ಕೈಗೊಂಡಿರುವ ಈ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವಿರಾಜಪೇಟೆ ಶಾಖೆ ತೀವ್ರವಾಗಿ ಖಂಡಿಸುತ್ತದೆ.

●

ದ್ರಾಕ್ಷಿ ಕೆಲಸಗಾರರ ಮುಷ್ಕರ

ಬೆಂಗಳೂರು ದ್ರಾಕ್ಷಿ ಬೆಳೆಗಾರರ ಮಾರಾಟ, ಸಂಸ್ಕರಣ ಸಹಕಾರಸಂಘದ ಮೈಸೂರು ಶಾಖೆಯ ಸುಮಾರು 36 ಮಂದಿ ಕೆಲಸಗಾರರು, ಬೋನಸ್ ಖಾಯಂಗೊಳಿಸುವಿಕೆ, ಸಂಬಳದಲ್ಲಿ ಹೆಚ್ಚುವರಿಗಾಗಿ ಲೇಬರ್ ಇಲಾಖೆಯ ಮುಂದೆ ಬೇಡಿಕೆ ಮಂಡಿಸಿ ಇತ್ಯರ್ಥವಾಗದೆ ಇರುವುದರಿಂದ ಅವುಗಳ ತೀರ್ಮಾನಕ್ಕೆ ಒತ್ತಾಯ ತರುವುದಕ್ಕಾಗಿ ತಾರೀಖು 11-6-1979 ರಿಂದ ಮುಷ್ಕರ ಹೂಡಿರುತ್ತಾರೆ. ಸಂಘದ ಅಧ್ಯಕ್ಷ ಕಾಂ. ಉಗ್ರಪ್ಪ ಮತ್ತು ಕಾರ್ಯದರ್ಶಿ ಕಾಂ. ಎಂ. ಶೇಕರ್ ಹೋರಾಟಕ್ಕೆ ಸಹಕಾರವನ್ನು ಕೋರಿದ್ದಾರೆ.

ಬಹಿರಂಗ ಸಭೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಬೆಂಗಳೂರು ನಗರ ಶಾಖೆ ತಾ. 3-6-79 ರಂದು ಸಂಜೆ ಸಿಟಿಮಾರ್ಕೆಟ್‌ಬಳಿ ಪಕ್ಷದ ಬಹಿರಂಗ ಸಭೆಯನ್ನು ಏರ್ಪಡಿಸಿತ್ತು. ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಕುರಿತು ಕಾಂ. ಎಸ್. ಸೂರ್ಯನಾರಾಯಣರಾವ್‌ರವರು ಮಾತನಾಡಿದರು. ಹಳ್ಳಿಗಳಲ್ಲಿ ಅಸಂಘಟಿತ ಕಾರ್ಮಿಕರು ಹಾಗೂ ರೈತರ ಸಮಸ್ಯೆಗಳ ಬಗ್ಗೆ ಕಾಂ. ಮುಗುವಾಳಪ್ಪನವರು ಸಭಿಕರಿಗೆ ಮನವರಿಕೆ ಮಾಡಿಕೊಟ್ಟರು. ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್, ಪ್ರಧಾನ ಕಾರ್ಯದರ್ಶಿ ಕಾಂ. ಸುಬ್ರಮಣಿಯವರು ಕಾರ್ಮಿಕರ ಹಲವಾರು ಸಮಸ್ಯೆಗಳು, ಅದರಲ್ಲೂ ಆಟೋ ಚಾಲಕರ ಸಮಸ್ಯೆಗಳ ಬಗ್ಗೆ ಸಭೆಗೆ ವಿವರಿಸಿದರು. ಕಾಂ. ಜಗನ್ನಾಥ್‌ರವರು ಮಾತನಾಡುತ್ತಾ, ಹಳ್ಳಿಗಳಲ್ಲಿ ಎಚ್ಚೆತ್ತ ರೈತರು ನಡೆಸುತ್ತಿರುವ ಹೋರಾಟಗಳನ್ನು ಯಶಸ್ವಿಗೊಳಿಸಲು ಎಲ್ಲರ ಸಹಕಾರ ಅಗತ್ಯವೆಂದು ಹೇಳಿ, ಪೋಲೀಸ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ಈಗಿನ ಮನೋಭಾವ ಬದಲಾಗದಿದ್ದರೆ, ಜನತೆಯೇ ಅವರನ್ನು ದಾರಿಗೆ ತರಬೇಕಾಗುತ್ತದೆ ಎಂದರು.

ನಗರ ಶಾಖೆಯ ಕಾರ್ಯದರ್ಶಿ ಕಾಂ. ಐಯ್ಯಪ್ಪನ್‌ರವರು ಪ್ರಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

ನಾಗರಿಕರ ಸಂಯುಕ್ತ ರಂಗದ ರಚನೆ

ಇದೇ 7.6.1979ರಂದು ಕನ್ನಡ ಚಳುವಳಿಗಾರರು, ಕಾಂಗ್ರೆಸ್, ಡಿ.ಎಂ.ಕೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ-ಕರ್ನಾಟಕ ರಾಜ್ಯ ಸಮಿತಿ, ಭಾರತ ಕಮ್ಯುನಿಸ್ಟ್ ಪಕ್ಷ-ಕರ್ನಾಟಕ ರಾಜ್ಯ ಮಂಡಲಿ,–ಈ ಪಕ್ಷಗಳ ಪ್ರತಿನಿಧಿಗಳು ಸೇರಿ ರಾಜ್ಯದ ಹಾಗೂ ಬೆಂಗಳೂರಿನ ಜನತೆಯ ಮುಂದಿರುವ ಸಮಸ್ಯೆಗಳನ್ನು ಕೂಲಂಕುಷವಾಗಿ ಚರ್ಚಿಸಿದರು. ಭಾಷೆ, ನೀರು, ತೆರಿಗೆ, ಬೆಲೆ ಏರಿಕೆ, ನಿರುದ್ಯೋಗ, ಕಾರ್ಮಿಕರ ಮತ್ತು ಮಧ್ಯಮವರ್ಗದವರ ಪ್ರಶ್ನೆಗಳು–ಹೀಗೆ ಹಲವಾರು ಸಮಸ್ಯೆಗಳು ರಾಜ್ಯದ ಜನತೆಯನ್ನು ಕಾಡುತ್ತಿವೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳ ಧೋರಣೆಗಳು ಈ ಸಮಸ್ಯೆಗಳನ್ನು ಬಗೆಹರಿಸುವ ಬದಲು ಉಲ್ಬಣಗೊಳಿಸುವ ರೀತಿಯಲ್ಲಿವೆ. ಜನತೆ ಕಷ್ಟಕಾರ್ಪಣ್ಯಗಳಿಂದ ತೊಳಲುತ್ತಿದ್ದಾರೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ರಿಯಾಶೀಲರಾಗಿ ಹೋರಾಟ ನಡೆಸಬೇಕೆಂದು ಈ ಸಭೆಯಲ್ಲಿ ಸೇರಿದ್ದ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ನಿರ್ಧರಿಸಿದ್ದಾರೆ.

'ನಾಗರಿಕರ ಸಂಯುಕ್ತ ರಂಗ'ಎಂಬ ವೇದಿಕೆಯನ್ನು ರಚಿಸಿ ಐಕ್ಯತಾ ಚಳವಳಿಯನ್ನು ರೂಪಿಸಬೇಕೆಂದು ನಿರ್ಧರಿಸಲಾಗಿದೆ.

ಜನತೆಯನ್ನು ಬಾಧಿಸುತ್ತಿರುವ ಕೆಳಗಿನ ಪ್ರಮುಖ ಸಮಸ್ಯೆಗಳನ್ನು ಮುಂದಿಟ್ಟು ಕೂಡಲೇ ಐಕ್ಯತಾ ಚಳವಳಿ ರೂಪಿಸಬೇಕೆಂದು ನಾಗರಿಕರ ಸಂಯುಕ್ತ ರಂಗ ನಿರ್ಧರಿಸಿದೆ.

1. ಆಡಳಿತ ಭಾಷೆ ಕನ್ನಡವಾಗಬೇಕು. ಎಲ್ಲಾ ಹಂತಗಳಲ್ಲೂ ಕನ್ನಡದಲ್ಲೇ ವಿದ್ಯಾಭ್ಯಾಸ ನಡೆಯಬೇಕು.

2. ಬೆಂಗಳೂರು ಜಲಮಂಡಲಿಯವರು ಏರಿಸಿರುವ ನೀರಿನ ದರವನ್ನು ಕಡಿಮೆ ಮಾಡಲು : ನೀರನ್ನು ನಗರದ ಜನತೆಗೆ ಪರಿಣಾಮಕಾರಿಯಾಗಿ ಸರಬರಾಜು ಮಾಡುವುದು.

3. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಕಡಿಮೆ ದರದಲ್ಲಿ ಒದಗಿಸುವುದು : ಶಾಲಾ ಕಾಲೇಜುಗಳಲ್ಲಿ ಪ್ರವೇಶ ಸಿಗಲು ಅವಕಾಶ : ಖಾಸಗಿ ಶಾಲೆಗಳಲ್ಲಿ ಶುಲ್ಕವನ್ನು ಕಡಿಮೆ ಮಾಡುವುದು : ಸರ್ಕಾರ ನಿಷ್ಕರ್ಷೆ ಮಾಡಿದ ಶುಲ್ಕಕ್ಕಿಂತ ಹೆಚ್ಚಿನದನ್ನು ವಸೂಲಿಮಾಡಕೂಡದು : ಪೋಷಕರ, ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಶೋಷಣೆಯ ವಿರುದ್ಧ.

4. ವಿಜಯನಗರ ಉಕ್ಕಿನ ಕಾರ್ಖಾನೆಯ ಸ್ಥಾಪನೆಗಾಗಿ : ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ.

5. ಬೆಲೆ ಏರಿಕೆಯ ವಿರುದ್ಧ : ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನತೆಯ ಮೇಲೆ ಹೊರಿಸಿರುವ ತೆರಿಗೆಗಳ ವಿರುದ್ಧ : ಬೆಲೆ ಕಡಿಮೆ ಮಾಡಲು ಪರಿಣಾಮಕಾರಿ ಕಾರ್ಯಕ್ರಮ ಕೈಗೊಳ್ಳಲು.

6. ಕೇಂದ್ರದ ಕೈಗಾರಿಕಾ ಬಾಂಧವ್ಯ ಮಸೂದೆ, ಕರ್ನಾಟಕ ಅಗತ್ಯ ಸೇವೆಗಳ ಮಸೂದೆಗಳ ವಿರುದ್ಧ : ಜೀವನಾವಶ್ಯಕ ಆಧಾರದ ಮೇಲೆ ಕನಿಷ್ಠ ಕೂಲಿಯ ನಿಷ್ಕರ್ಷೆ : ಕನಿಷ್ಠ ಕೂಲಿ ಶಾಸನದಲ್ಲಿ ಬೆಲೆ ಏರಿಕೆಗನುಗುಣವಾಗಿ ವೇತನ ಹೆಚ್ಚಳ : ಕೈಗಾರಿಕಾ ವಿವಾದಗಳಲ್ಲಿ ಪೋಲೀಸರ ಪ್ರವೇಶದ ವಿರುದ್ಧ.

7. ವೃತ್ತಿ ತೆರಿಗೆ ರದ್ದಾಗಲು.

8. ಪೋಲೀಸರಿಗೆ ಸಂಘಟನಾ ಹಕ್ಕುಗಳನ್ನು ಕೊಡಲು ಮತ್ತು ಅವರ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು.

9. ಬೆಂಗಳೂರಿನ ಸುತ್ತಲೂ ವೃತ್ತ ರೈಲ್ವೆಯ ರಚನೆ.

10. ಬೆಂಗಳೂರು ನಗರ ಕಾರ್ಪೊರೇಷನ್ ಮತ್ತು ಚುನಾವಣೆಗಳು ಜರುಗದಿರುವ ಇತರ ನಗರಸಭೆ ಮತ್ತು ಕಾರ್ಪೊರೇಷನ್‌ಗಳ ಚುನಾವಣೆಗಳನ್ನು ಕೂಡಲೇ ನಡೆಸುವುದು.

ಬೇಡಿಕೆ ಮತ್ತು ಸಮಸ್ಯೆಗಳನ್ನು ಚರ್ಚಿಸಿ, ಹೋರಾಟದ ಕಾರ್ಯಕ್ರಮವನ್ನು ರೂಪಿಸಲು 24.6.79 ರಂದು ಬೆಂಗಳೂರು ಪುರಭವನದಲ್ಲಿ ಈ ಎಲ್ಲಾ ಪಕ್ಷ ಮತ್ತು ಸಂಘಟನೆಗಳ ಪ್ರತಿನಿಧಿಗಳ ಸಮಾವೇಷ ನಡೆಸಲು ತೀರ್ಮಾನಿಸಲಾಗಿದೆ. ●

ಚಿನ್ನಕ್ಕೆ ನ್ಯಾಯವಾದ ಬೆಲೆ!

ಕಾರ್ಮಿಕರಿಗೆ ನ್ಯಾಯವಾದ ಲಾಭಾಂಶ!!

—ಸವರೀದಾಸ್

ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಜಗತ್ ವಿಖ್ಯಾತವಾದ ಚಿನ್ನದ ಗಣಿ ಸುಮಾರು ೧೦೦ ವರ್ಷಗಳಿಂದಲೂ ಇದ್ದು, ಇಲ್ಲಿ ಸುಮಾರು ೧೧ ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಜನತಾ ಸರ್ಕಾರದ ಆರ್ಥಿಕ ನೀತಿಯ ದೆಸೆಯಿಂದ ಕಾರ್ಮಿಕರಿಗೆ ಅನ್ಯಾಯವಾಗುತ್ತಿದ್ದು ಮಾನ್ಯ ಪ್ರಧಾನಿಯವರು ಇದಕ್ಕೆ ಸಾಕ್ಷಿಯಾಗಿ ಗಣಿಗಳು ನಷ್ಟದಲ್ಲಿ ನಡೆಯುತ್ತಿದೆಯೆಂದು ದುರ್ವಾರ್ಥವಾಗಿ ಈ ಗಣಿಗಳನ್ನು ಸರ್ಕಾರವು ನಡೆಸುತ್ತಿದೆಯೆಂಬ ಮೊಂಡುವಾದವನ್ನು ಮಂಡಿಸುತ್ತಿದ್ದಾರೆ.

ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಗಣಿಗಳಲ್ಲಿಯ ಪ್ರಮುಖ ಕಾರ್ಮಿಕ ಸಂಘವಾದ ಸಿ. ಐ. ಟಿ. ಯು. ವಿನ ಪದಾಧಿಕಾರಿಗಳು ಉಕ್ಕು ಮತ್ತು ಗಣಿ ಇಲಾಖೆಯ ಮಾನ್ಯ ಮಂತ್ರಿಗಳಾದ ಕಾರಿಯಮುಂಡರವರು ಈ ಪ್ರದೇಶಕ್ಕೆ ಭೇಟಿ ನೀಡಿದ್ದಾಗ ಚಿನ್ನದ ಬೆಲೆ ನಿಗದಿ ಬಗ್ಗೆ ಒಂದು ಮನವಿಯನ್ನು ಅರ್ಪಿಸಿದರು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ೧೦ ಗ್ರಾಂ ಚಿನ್ನಕ್ಕೆ ೫೫೩.೯೯ ರೂಪಾಯಿಗಳಿದ್ದು ಇಲ್ಲಿಯ ಚಿನ್ನದ ಗಣಿಗಳಲ್ಲಿ ಹೊರ ಬರುವ ಪ್ರತಿ ೧೦ ಗ್ರಾಂ ಚಿನ್ನಕ್ಕೆ ಕೇಂದ್ರ ಸರ್ಕಾರವು ೬೯೨ ರೂಪಾಯಿಗಳನ್ನು ನಿಗದಿ ಮಾಡಿದೆ. ಆದರೆ ನಮ್ಮ ದೇಶದಲ್ಲಿ ೧೦ ಗ್ರಾಂ ಚಿನ್ನಕ್ಕೆ ಸುಮಾರು ಒಂದುಸಾವಿರದ ನೂರು ರೂಪಾಯಿಗಳಿಗೂ ಹೆಚ್ಚಾಗಿ ಮಾರಾಟವಾಗುತ್ತಿದೆ. (ಬಹಿರಂಗ ಮಾರುಕಟ್ಟೆಯಲ್ಲಿ).

ಅಂತರ ರಾಷ್ಟ್ರೀಯ ಮಾರುಕಟ್ಟೆಯ ಬೆಲೆಗೂ ಸರ್ಕಾರ ನಿಗದಿ ಮಾಡಿರುವ ಬೆಲೆಗೂ ಇರುವ ವ್ಯತ್ಯಾಸ ಸುಮಾರು ೧೩೮ ರೂಪಾಯಿಗಳಾಗಿದ್ದು, ಇದನ್ನು ಕೇಂದ್ರ ಸರ್ಕಾರ ನೀಡುತ್ತಿದ್ದು, ಇದನ್ನೇ 'ಸಹಾಯಧನ' ಎಂದು ಕೇಂದ್ರ ಸರ್ಕಾರವು ಹೇಳುತ್ತಿದೆ.

ನಮ್ಮ ದೇಶದಲ್ಲಿನ ಬಹಿರಂಗ ಮಾರುಕಟ್ಟೆಯ ಬೆಲೆಗೂ ಕೇಂದ್ರ ಸರ್ಕಾರ ನಿಗದಿಗೊಳಿಸಿರುವ ಬೆಲೆಗೂ ಇರುವ ವ್ಯತ್ಯಾಸವು ಸುಮಾರು ೪೦೦ ರೂಪಾಯಿಗಳಾಗಿದ್ದು ಇದನ್ನು ಆಧಾರವಾಗಿಟ್ಟುಕೊಂಡು ೧೯೭೭-೭೮ ನೇ ಸಾಲಿನಲ್ಲಿ ಹೊರ ತೆಗೆದ ೧೯ ಲಕ್ಷ ಗ್ರಾಂ ಚಿನ್ನದ ಬೆಲೆಯನ್ನು ನೋಡಿದರೆ ಸುಮಾರು ೭.೬ ಕೋಟಿ ರೂಪಾಯಿಗಳ ನಿವ್ವಳ ವ್ಯತ್ಯಾಸ ತೋರುವುದು. ಆದರೂ ಸಹ ಕೇಂದ್ರದಲ್ಲಿ ಆಡಳಿತದಲ್ಲಿರುವ ಜನತಾ ಸರ್ಕಾರ ಈ ಗಣಿಗಳು ನಷ್ಟದಲ್ಲಿ ನಡೆಯುತ್ತಿದೆಎಂಬ ಮೊಂಡುವಾದವನ್ನೇ ಅವಲಂಬಿಸಿದ್ದಾರೆ. ಈ ವಾದವು ಹುರುಳಿಲ್ಲದ್ದಾಗಿದ್ದು ಇದು ಕಾರ್ಮಿಕ ವಿರೋಧಿ ನೀತಿ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಈ ಆಧಾರದ ಮೇಲೆ ಸಿ. ಐ. ಟಿ. ಯು. ಸಂಘವು ಆಡಳಿತವರ್ಗದವರೊಡನೆ ವಾದ ಹೂಡಿ ಕಾರ್ಮಿಕರಿಗೆ ಗರಿಷ್ಠ ಬೋನಸ್ ನೀಡಬೇಕೆಂದು ಒತ್ತಾಯಿಸಿದೆ. ಈ ಬಗ್ಗೆ ಆಡಳಿತ ವರ್ಗದ ಮೌನವು ಕಾರ್ಮಿಕ ಸಂಘದ ವಾದವನ್ನು ಇನ್ನಷ್ಟು ಪುಷ್ಟಿಗೊಳಿಸಿದಂತಾಗಿದೆ.

ಕೇಂದ್ರಸರ್ಕಾರದ ಈ ಬಗೆಯ ಧೋರಣೆಯನ್ನು ಎತ್ತಿ ತೋರಿಸುತ್ತಂತೆ "ಹಟ್ಟಿ ಚಿನ್ನದಗಣಿ ಪ್ರದೇಶದಲ್ಲಿ ತೆಗೆಯುವ ಚಿನ್ನಕ್ಕೆ ನಮ್ಮ ದೇಶದಲ್ಲಿನ ಬಹಿರಂಗ ಮಾರುಕಟ್ಟೆಯ ಬೆಲೆಯನ್ನು ಆಧಾರವಾಗಿಟ್ಟುಕೊಂಡು ಆ ಚಿನ್ನದ ಬೆಲೆಯನ್ನು ನಿಗದಿಗೊಳಿಸಿದೆ",

ಸಿ. ಐ. ಟಿ. ಯು. ಸಂಘವು ಇಲ್ಲಿನ ಚಿನ್ನದ ಗಣಿಗಳಲ್ಲಿ ತೆಗೆಯುವ ಚಿನ್ನಕ್ಕೆ ಭಾರತದಲ್ಲಿನ ಬಹಿರಂಗ ಮಾರುಕಟ್ಟೆಯ ಬೆಲೆಯನ್ನು ನಿಗದಿಪಡಿಸಬೇಕೆಂದು ಹಾಗೂ ಕಾರ್ಮಿಕರಿಗೆ ನ್ಯಾಯವಾಗಿ ಸಿಗಬೇಕಾಗಿರುವ ಲಾಭಾಂಶ ಹಾಗೂ ಗರಿಷ್ಠ ಬೋನಸ್ ನೀಡಬೇಕೆಂದು ಒತ್ತಾಯಿಸುತ್ತದೆ.

○

ದ. ಕ. ಜಿಲ್ಲಾ ಎಸ್. ಎಫ್. ಐ. ಸಭೆ

ತಾ|| 3.6.79 ರಂದು ಎಸ್. ಎಫ್. ಐ., ದ.ಕ. ಜಿಲ್ಲಾ ಸಮಿತಿಯ ಸದಸ್ಯರು ಮಂಗಳೂರಿನ ಜಿಲ್ಲಾ ಸಮಿತಿ ಕಚೇರಿಯಲ್ಲಿ ಸೇರಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ರಾಜೇಂದ್ರನ್ ರವರು ವಹಿಸಿದ್ದರು. ಪ್ರತಿಯೊಂದು ತಾಲ್ಲೂಕಿನ ಜಿಲ್ಲಾ ಸಮಿತಿ ಸದಸ್ಯರು ಸಭೆಗೆ ಆಗಮಿಸಿದ್ದರು. ಸಭೆಯಲ್ಲಿ ಕರ್ನಾಟಕ ರಾಜ್ಯ ಸಮಿತಿಯ ತೀರ್ಮಾನಗಳು ಹಾಗೂ ಸಂಘಟನಾತ್ಮಕ ವಿಷಯಗಳ ಕುರಿತು ಚರ್ಚಿಸಲಾಯಿತು, ಮುಂದೆ ನಡೆಯುವ ರಾಜಕೀಯ ತರಗತಿಗಳ ಕ್ಯಾಂಪಿಗೆ ಜಿಲ್ಲೆಯಿಂದ ಹದಿಮೂರು ಮಂದಿಯನ್ನು ಆರಿಸಲಾಯಿತು. ಆಯಾ ತಾಲ್ಲೂಕುಗಳಿಗೆ "ಸದಸ್ಯತ್ವ ಕೋಟಾ" ಹಾಗೂ "ರಾಜ್ಯ ನಿಧಿ ಕೋಟಾ"ವನ್ನು ನೀಡಲಾಯಿತು. ದ.ಕ. ಜಿಲ್ಲಾ ಎಸ್.ಎಫ್.ಐ.ನ್ನು ಬಲಿಷ್ಠವಾಗಿ ಬೆಳೆಸಲು, ಕಾಲೇಜು ಹಾಗೂ ತಾಲ್ಲೂಕು ಶಾಖೆಗಳನ್ನು ಪ್ರಾರಂಭಿಸಲು ನಿರ್ಧರಿಸಲಾಯಿತು. ವಿದ್ಯಾರ್ಥಿಗಳಲ್ಲಿ ಎಸ್.ಎಫ್.ಐ. ಮತ್ತು ರಾಜಕೀಯದ ಕುರಿತು ತಿಳುವಳಿಕೆಯನ್ನು ಬೆಳೆಸಲು ಜಿಲ್ಲೆಯಲ್ಲಿ ಹದಿನೈದು ದಿನಗಳಿಗೊಮ್ಮೆ ರಾಜಕೀಯ ತರಗತಿಗಳನ್ನು (study clases) ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ಜಿಲ್ಲಾ ನಾಯಕರು ಅಗತ್ಯವಿದ್ದಾಗಲೆಲ್ಲಾ ತಾಲ್ಲೂಕು ಶಾಖೆಗಳಿಗೆ ಭೇಟಿ ಕೊಟ್ಟು, ಸೂಕ್ತ ಮಾರ್ಗದರ್ಶನ ನೀಡಬೇಕೆಂಬ ಸೂಚನೆಯನ್ನು ಅಂಗೀಕರಿಸಲಾಯಿತು.

ಕಾಂ. ರಾಜೇಂದ್ರನ್‌ರವರಿಗೆ ಅಧ್ಯಕ್ಷ ಪದದಲ್ಲಿ ಮುಂದುವರಿಯಲು ಅನಾನುಕೂಲತೆಗಳು ಇರುವುದರಿಂದ ಹೊಸ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು. ಕಾಂ. ರಾಘವರನ್ನು ಹೊಸ ಅಧ್ಯಕ್ಷರನ್ನಾಗಿಯೂ ಮತ್ತು ಕಾಂ. ಶ್ರೀನಿವಾಸವಾಟೆಕರ'ರನ್ನು ಕಾರ್ಯದರ್ಶಿಯಾಗಿಯೂ ಸರ್ವಾನುಮತದಿಂದ ಆರಿಸಲಾಯಿತು. ○

ಕುಂದಲ ಕುರ್ಗಿಯಲ್ಲಿ ಮಾರ್ಕ್ಸಿಸ್ಟರ ವಿಜಯ

ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು ಕುಂಡಲಕುರ್ಗಿಯಲ್ಲಿ ಕಳೆದ ವರ್ಷ ಪಂಚಾಯತ್ ಚುನಾವಣೆ ನಡೆದಿದ್ದು ಎಲ್ಲಾ ಆರು ಸ್ಥಾನಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಪ್ರಚಂಡ ಬಹುಮತದಿಂದ ಗೆದ್ದಿದ್ದರು. ಪ್ರಾಂತ ರೈತ ಸಂಘದ ಕಾರ್ಯದರ್ಶಿಗಳಲ್ಲೊಬ್ಬರಾದ ಕಾಂ. ಕೆ. ಎಮ್. ವೆಂಕಟೇಶನವರು ಪಂಚಾಯತ್ ಛೇರ್‌ಮೇನ್ ಆಗಿ ಚುನಾಯಿತರಾಗಿದ್ದರು. ಕಾದಿರಿಸಿದ ಸ್ಥಾನಕ್ಕೆ ಆಯ್ಕೆಯಾಗಿದ್ದವರು ಒಬ್ಬರು 5 ತಿಂಗಳ ಹಿಂದೆ ಆಕಸ್ಮಿಕವಾಗಿ ಮೃತಪಟ್ಟಿದ್ದು, ಖಾಲಿಬಿದ್ದ ಸ್ಥಾನಕ್ಕೆ ಮತ್ತೆ 10-6-79 ರಂದು ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ನಿಧನರಾದ ಸದಸ್ಯರ ಪತ್ನಿ ಶ್ರೀಮತಿ ಕೃಷ್ಣಮ್ಮನವರು ಸ್ಪರ್ಧಿಸಿದ್ದು, ಪಕ್ಷದ ಉಮೇದ್ವಾರರಾದ ಇವರು ಜನತಾ ಅಭ್ಯರ್ಥಿಯನ್ನು ಸೋಲಿಸಿ ಆಯ್ಕೆಯಾಗಿರುವರು. ಶ್ರೀಮತಿ ಕೃಷ್ಣಮ್ಮನವರಿಗೆ 344 ಮತಗಳು ದೊರೆತಿದ್ದು, ಜನತಾ ಅಭ್ಯರ್ಥಿಗೆ 197 ಮತಗಳು ದೊರೆತಿವೆ.

○

ಆಟೋ ಮುಷ್ಕರಕ್ಕೆ ಬೆಂಬಲವಿಲ್ಲ

ಸರಕಾರ ನಿಗದಿ ಮಾಡಿದ ಕನಿಷ್ಠ ದರವನ್ನು ಒಪ್ಪಿಕೊಂಡಿರುವುದಾಗಿ ಬೆಂಗಳೂರು ನಗರ ಆಟೋ ಚಾಲಕರ ಸಂಘವು ಒಪ್ಪಿಕೊಂಡಿರುವುದಾಗಿ, ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಅವರು ತಿಳಿಸಿದ್ದಾರೆ. ಮತ್ತೆ ಪೆಟ್ರೋಲ್ ದರ ಏರಿದರೆ ನಗರದ ಆಟೋ ದರವನ್ನು ಪುನಃ ಏರಿಸಬೇಕಾಗಬಹುದೆಂದೂ ತಿಳಿಸಿದರು.

ಒಂದು ವಿಭಾಗದ ಆಟೋ ಚಾಲಕರು 20-6-79ರಿಂದ ಮುಷ್ಕರ ನಡೆಸುವುದಾಗಿ ಹೇಳಿದ್ದು, ಇದಕ್ಕೂ ಬೆಂಗಳೂರು ನಗರ ಆಟೋಚಾಲಕರ ಸಂಘಕ್ಕೂ ಏನೂ ಸಂಬಂಧವಿಲ್ಲ ಎಂದಿರುವರು. ಇದಕ್ಕೆ ಬೆಂಬಲವೂ ಇಲ್ಲಎಂದಿರುವರು. ನ್ಯಾಯಯುತವಾಗಿ ಆಟೋ ಓಡಿಸುವ ಚಾಲಕರಿಗೆ ಪೋಲೀಸರು ರಕ್ಷಣೆ ಕೊಡುವರಾಗಿ ಸಂಘವು ಅಪೇಕ್ಷಿಸುತ್ತದೆ ಎಂದು ತಿಳಿಸಿದರು.

○

ಗೇಣಿ ವಸೂಲಿ ವಿರೋಧಿಸಲು ಕಾರವಾರ ರೈತಸಂಘದ ಕರೆ.

ಕರ್ನಾಟಕ ರಾಜ್ಯದ ಸರಕಾರ ಭೂಸುಧಾರಣೆಯನ್ನು ಜಾರಿಯಲ್ಲಿ ತಂದು 5 ವರ್ಷಗಳಾದವು. ಆದರೆ ಜಮೀನ್ದಾರಿಯನ್ನು ನಿರ್ಮೂಲ ಮಾಡುವುದು ಇರಲಿ, ಜಮೀನ್ದಾರರು ಮಾಡುವ ಗೇಣಿಯ ಲೂಟಿಯನ್ನು ತನ್ನ ಕಾಯ್ದೆಯಿಂದ ಕೊನೆಗೊಳಿಸಲಿಕ್ಕೆ ಈ ಸರಕಾರಕ್ಕೆ ಸಾಧ್ಯವಾಗಲಿಲ್ಲ. ಬದಲು ಜಮೀನ್ದಾರರ ಹಿಂದಿನ ಗೇಣಿಯನ್ನು ವಸೂಲಿ ಮಾಡಿಕೊಡುವ ಏಜೆನ್ಸಿಯನ್ನು ಪಡೆದಿದೆ. ಒಂದು ಕಡೆಗೆ ಭೂಸುಧಾರಣೆಯ ಹೆಸರು ಹೇಳಿ ರೈತರನ್ನು ಮೋಸಗೊಳಿಸಿ ಇನ್ನೊಂದು ಕಡೆಗೆ ಜಮೀನ್ದಾರರ ಸಂರಕ್ಷಣೆ ಮಾಡುತ್ತಾ ಜಮೀನ್ದಾರರು ಮಾಡುವ ಲೂಟಿಯಲ್ಲಿ ಸಮಭಾಗಿಯಾಗಿದೆ ಈ ಕಾಂಗ್ರೆಸ್ ಸರ್ಕಾರ.

ಇಷ್ಟಾದರೂ ಜಮೀನ್ದಾರರ ಗೇಣಿ ವಸೂಲಿ ರದ್ದಾಗಿದೆಯೇ? ಇಲ್ಲ. ಮೊದಲು ಜಮೀನ್ದಾರರು ಬಂದು ತಮ್ಮ ಲೆಕ್ಕದ ಗೇಣಿ ವಸೂಲಿ ಮಾಡಿದರೆ ಈಗ ಸರಕಾರ ಕಾಯ್ದೆ ಲೆಕ್ಕದ ಗೇಣಿಯನ್ನು ರೈತರಿಂದ ವಸೂಲು ಮಾಡಿ ಜಮೀನ್ದಾರರಿಗೆ ಕೊಡುತ್ತದೆ. ಕಾರವಾರ ತಾಲ್ಲೂಕಿನಲ್ಲಿ ಎಷ್ಟೋ ಕಡೆಗೆ ಜಮೀನ್ದಾರರು ತಮಗೆ ರೈತರಿಂದ 1974ರ ಪೂರ್ವದ ಬರಬೇಕಾದ ಗೇಣಿಯು ಸಲುವಾಗಿ ದಾವೆಗಳನ್ನು ಸರಕಾರದ ಭೂಸುಧಾರಣೆಯನ್ನು ಅಮಲಬಜಾವಣೆ ಮಾಡುವ ಮುಖ್ಯ ಏಜೆನ್ಸಿಯಾದ ಟ್ರಿಬ್ಯುನಲ್(ಭೂಪಂಚಾಯ್ತಿ) ನಲ್ಲಿ ಮಾಡುತ್ತಿದ್ದಾರೆ. ಗೇಣಿದಾರ ರೈತರನ್ನು ಒತ್ತಾಯದಿಂದ ಗೇಣಿ ಬಾಕಿ ಇದ್ದುದನ್ನು ಅವರಿಂದ ಬರೆಯಿಸಿಕೊಂಡು ನಂತರ ಆ ಗೇಣಿಯನ್ನು ವಸೂಲಿ ಮಾಡಲು ಶ್ಯಾನಭೋಗರಲ್ಲಿ ಕಳುಹಿಸಿಕೊಡಲಾಗುತ್ತಿದೆ. ಮತ್ತು ಶ್ಯಾನಭೋಗರೇ ಅಂಥ ಪೈಸಲಾದ ಗೇಣಿ ದಾವೆಯನ್ನು ಜಾರಿ ಮಾಡಿ ರೈತರಿಂದ ಗೇಣಿ ವಸೂಲಿ ಮಾಡಿ ಜಮೀನ್ದಾರರಿಗೆ ಕೊಟ್ಟು ಜಮೀನ್ದಾರರಿಂದ ಸಂಬಂಧಪಟ್ಟ ಪಾಲಿನ ಆಯಾ ರೈತರಿಂದ ಗೇಣಿ ಮುಟ್ಟಿದ ಬಗ್ಗೆ ಪಾವತಿ ಪಡೆದು ಟ್ರಿಬ್ಯುನಲ್‌ಗೆ ಕಳಿಸಲಾಗುತ್ತಿದೆ.

ಎಂಥ ಮೋಸ! ಗೇಣಿದಾರರ ಗುಲಾಮಗಿರಿಯನ್ನು ತೊಡೆಯಲು ತಮ್ಮ ಸರಕಾರ ಪ್ರಯತ್ನಿಸುತ್ತದೆಂದು ಕಾಂಗ್ರೆಸ್ ಸರಕಾರದ ಮುಖಂಡರು ತಮ್ಮ ಕಾರ್ಯಗಳ ಬಗ್ಗೆ ಮೇಲಿಂದ ಮೇಲೆ ಭಾಷಣ ಬಿಗಿದುಕೊಳ್ಳುತ್ತಿದ್ದಾರಲ್ಲವೆ? ಆದರೆ ಈ ಕಾಂಗ್ರೆಸ್ ಸರಕಾರವೇ ಜಮೀನ್ದಾರ ವರ್ಗದ ಪಕ್ಕಾ ಹಿತರಕ್ಷಕ ಆಗಿರುವುದರಿಂದ ಜಮೀನ್ದಾರ ವರ್ಗದ ಸಂರಕ್ಷಣೆಗೆ ಈ ಕಾಯ್ದೆ ತಂದಿದ್ದು, ಮತ್ತು ಮೊದಲು ಜಮೀನ್ದಾರರು ಪ್ರತ್ಯಕ್ಷವಾಗಿ ಮಾಡುವ ದಬ್ಬಾಳಿಕೆ, ಅನ್ಯಾಯ, ಅತ್ಯಾಚಾರ, ಶೋಷಣೆ ಈಗ ಸರಕಾರ ತನ್ನ ಕಾಯ್ದೆಯ ಮುಖಾಂತರ ಮಾಡಿ ಜಮೀನ್ದಾರಿಯನ್ನು ಜೀವಂತ ಉಳಿಸಲು ಪ್ರಯತ್ನಿಸುತ್ತದೆ. ರೈತರಲ್ಲಿ ಕಾವು ಹಿಂದೆ ಒಡೆಯರಿಗೆ ಕೊಟ್ಟ ಗೇಣಿಯ ಬಗ್ಗೆ ಪಾವತಿ ಇಲ್ಲದಿದ್ದಲ್ಲಿ ಅಥವಾ ಕೊಡುವದೇ ರೈತರು ಬಾಕಿ ಇದ್ದಲ್ಲಿ ಅದನ್ನು ತನ್ನ ಋಣ ವಿಮೋಚನೆಯಲ್ಲಿ ಅಥವಾ ಸಣ್ಣ ಹಿಡುವಳಿದಾರರೆಂದು ಅವರಿಗೆ ಮಾಫಿಯಾಗಿ ಬಿಡದೇ 1974ರ ನಂತರ ಪೂರ್ಣ ಗೇಣಿ ಬಾಕಿ ದಾವೆಗಳನ್ನು ವಜಾಗೊಳಿಸದೆ ಅವುಗಳನ್ನು ಜಮೀನ್ದಾರರ ಹಿತದೃಷ್ಟಿಯಿಂದ ಎತ್ತಿ ಹಿಡಿದು ಅಮಲ್‌ಬಜಾವಣೆಗೊಳಿಸಲಾಗುತ್ತಿದೆ. ಪೈಸಲಾದ ದಾವೆಗಳನ್ನು ಶಾನಭೋಗರ ಮುಖಾಂತರ ವಜಾಗೊಳಿಸಿ ಸರಕಾರವೇ ವಸೂಲಿ ಮಾಡಿ ಜಮೀನ್ದಾರರಿಗೆ ಮುಟ್ಟಿಸುತ್ತದೆ. ರೈತರ ಮೇಲೆ ಒತ್ತಾಯ ತಂದು ಹಿಂದಿನ ಗೇಣಿಯನ್ನು ವಸೂಲಿ ಮಾಡಿ ರೈತರು ಕಂಗಾಲಾಗುವ ಕಠಿಣ ಪರಿಸ್ಥಿತಿ ತರುತ್ತಿದೆ. ರೈತರ ಮನೆಯನ್ನು ಖಾಲಿ ಮಾಡಲು ಪ್ರಯತ್ನಿಸುತ್ತದೆ. ರೈತರ ಮೇಲೆ ಸಾಲದ ಹೊರೆಯನ್ನು ಇನ್ನಷ್ಟು ಬಿಗಿಗೊಳಿಸಿ ಅವರ ಜೀವನ ದುಸ್ತರಗೊಳಿಸುತ್ತಿದೆ. ಅದಕ್ಕಾಗಿಯೇ ಕಾರವಾರ ತಾಲ್ಲೂಕು ಕಿಸಾನ್ ಸಭೆಯು ರೈತರ ಮೇಲೆ ಆಗುವ ಈ ಶೋಷಣೆ, ಅನ್ಯಾಯವನ್ನು ತೀರ ಖಂಡಿಸುತ್ತದೆ. ರೈತರ ಮೇಲೆ ಪೈಸಲಾದ ಅಥವಾ ಪೈಸಲಾಗುವ ಹಿಂದಿನ ಗೇಣಿ ಬಾಕಿ ದಾವೆಗಳನ್ನು ಕೂಡಲೇ ರದ್ದುಗೊಳಿಸುವಂತೆ ಸರಕಾರವನ್ನು ಒತ್ತಾಯಿಸುತ್ತದೆ. ಆದರೆ ರೈತರು ಇನ್ನೂ ತೆಪ್ಪಗೆ ಕುಳಿತುಕೊಂಡರೆ ಪ್ರಯೋಜನವಾಗುವದಿಲ್ಲ. ರೈತರ ಮೇಲೆ ದಿವಸ ದಿವಸಕ್ಕೆ ಸಾಲದ ಹೊರೆ ಹೆಚ್ಚಾಗುತ್ತ ಹೋಗುತ್ತಿದೆ. ರೈತರು ತಮ್ಮ ಜೀವನ ಮತ್ತು ಭೂಮಿಯ ಸಂರಕ್ಷಣೆ ಮಾಡಲು ಪ್ರಯತ್ನಿಸುತ್ತಾ ಇರಬೇಕಾಗಿದೆ. ಆದ್ದರಿಂದ ಇನ್ನಾದರೂ ಬಡರೈತರು ಈ ಕಾಂಗ್ರೆಸ್ ಸರಕಾರದ ಮೇಲೆ ಅವಲಂಬಿಸದೆ ತಮ್ಮಲ್ಲಿ ಸಂಘಟನೆಯನ್ನು ಬಲಪಡಿಸಿ ಇಂಥ ಅನ್ಯಾಯಗಳನ್ನು ಪ್ರತಿಭಟಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಇಲ್ಲವಾದರೆ ಇಂದಿಗೆ ಪ್ರಾರಂಭವಾದ ಈ ಗೇಣಿ ಲೂಟಿಯು ಮುಂದೆ, ಭೂಮಿಯ ಪರಿಹಾರ ಲಿಲಾವು, ಹಕ್ಕು, ಪಟ್ಟಾ ಹಂಚುವಿಕೆಗಳ ಮುಖಾಂತರ ಒಂದಲ್ಲ ಇನ್ನೊಂದು ಮಾರ್ಗದಿಂದ ಇಡೀ ರೈತವರ್ಗವನ್ನು ದೋಚುವುದು ನಿಶ್ಚಯ.

ಎನ್. ಜಿ. ಮ್ಹಾಳಸೇಕರ

ಈ ವಾರವೂ ಯಾಂತ್ರಿಕ ತೊಂದರೆಗಳಿಂದ ಐಕ್ಯರಂಗವು ಹೊರಬರುವುದು ತಡವಾಯಿತು. ಮುಂದಿನ ವಾರದಿಂದ ಸಮಯಕ್ಕೆ ಸರಿಯಾಗಿ ಪ್ರಕಟಿಸುವ ಮತ್ತು ತಲುಪಿಸುವ ವ್ಯವಸ್ಥೆ ಮಾಡಲಾಗಿದೆ. ಓದುಗರೂ, ಏಜೆಂಟರುಗಳೂ ಸಹಕರಿಸಬೇಕಾಗಿ ವಿನಂತಿ.

ಎಂ. ಕೆ. ಭಟ್
ಸಂಪಾದಕ

ಪೋಲೀಸರ ದೌರ್ಜನ್ಯ ಖಂಡನೆ

ಜೂನ್ 7ರಂದು ಹಳಿಯಾಳದಲ್ಲಿ ಭೂಹೀನರು ಕೃಷಿಭೂಮಿ ಪಡೆಯಲು ನಡೆಸಿದ ನ್ಯಾಯಯುತ ಹೋರಾಟವು ಅನಿವಾರ್ಯ ಹಾಗೂ ದಿಟ್ಟ ಹೆಜ್ಜೆಯಾಗಿದೆ. ಸಮಾಜವಾದ ಗರೀಬೀ ಹಟಾವೋಗಳ ಹೆಸರಿನಲ್ಲಿ ಆಡಳಿತ ನಡೆಯುತ್ತಿದೆ ಎಂದು ಬೊಬ್ಬಿಡುವ ಆಡಳಿತವರ್ಗವು ಕೃಷಿಕರ ಬೇಡಿಕೆಗಳನ್ನು ನಿರ್ಲಕ್ಷಿಸಿ ಅವರ ಪ್ರತಿಭಟನೆಯ ವಿರುದ್ಧ ಆಯುಧ ಪ್ರಯೋಗ ತೀರಾ ಖಂಡನೀಯ. ಭೂಹೀನ ರೈತರು ನಡೆಸಿದ ಭೂಚಳುವಳಿಯಲ್ಲಿ ಚಳುವಳಿಗಾರರನ್ನು ಅಪಾಯಕಾರಿ ಜನ ಜಂಗುಳಿಯೆಂದು ಗುರುತಿಸಿ ಅವರ ಮೇಲೆ ಗೋಲಿಬಾರು ನಡೆಸಿದ್ದು ತೀರಾ ಅಮಾನುಷ ಹಾಗೂ ರೈತರನ್ನು ಕೆರಳಿಸುವಂಥದ್ದು ಆಗಿದೆ.

ಹಳಿಯಾಳದ ಗೋಲಿಬಾರಿನಲ್ಲಿ ಪೋಲೀಸರ ಗುಂಡಿಗೆ ಬಲಿಯಾಗಿ ಧೀರ ರಕ್ತ ಸಾಕ್ಷಿಯಾದ ರೈತನಿಗೆ ಶ್ರದ್ಧಾಂಜಲಿ ಅರ್ಪಿಸಲು ಕೊಡಗು ಜಿಲ್ಲೆಯ ಗೋಣಿಕೊಪ್ಪಲು ಪಟ್ಟಣದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿತೈಷಿಗಳು ಅಧಿಕ ಸಂಖ್ಯೆಯಲ್ಲಿ ಸೇರಿ ಕಪ್ಪು ಬಾವುಟದೊಂದಿಗೆ ಮೌನ ಮೆರವಣಿಗೆಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಸಿದರು. ಆನಂತರ ಸಂತಾಪ ಸೂಚಕ ಸಭೆ ನಡೆಸಿ ಮೃತನ ಆತ್ಮಕ್ಕೆ ಶಾಂತಿ ಕೋರಿದರು. ○

ಪರಿಸರ

ಹಿಂದಿ ಭಾಷೆಯನ್ನು ಹಿಂದಿಯೇತರರ ಮೇಲೆ ಹೇರುವುದನ್ನು ಕೇಂದ್ರದಲ್ಲಿನ ಜನತಾ ಪಕ್ಷವು ಕೈಬಿಡಬೇಕು. ದೇಶದ ಸಂಪರ್ಕ ಭಾಷೆ ಯಾವುದು ಆಗಬೇಕು ಎಂಬುದನ್ನು ಜನತೆ ಮತ್ತು ಇತಿಹಾಸ ಕ್ರಮೇಣವಾಗಿ ನಿರ್ಧರಿಸಲಿ.

'ಜನತಾ ಮಾಧ್ಯಮ' ಹಾಸನ

ಕರ್ನಾಟಕ ರಾಜ್ಯದ ಮಕ್ಕಳು ಓದುತ್ತಿರುವ ಪಠ್ಯಪುಸ್ತಕಗಳಲ್ಲಿ ಈಗಲೂ ಇಂದಿರಾಗಾಂಧಿಯೇ ಭಾರತದ ಪ್ರಧಾನಮಂತ್ರಿ. ಇದು ಸರ್ಕಾರದ ನಿಸ್ಸೀಮ ನಿರ್ಲಕ್ಷ್ಯವಲ್ಲದೆ ಮತ್ತೇನೂ ಅಲ್ಲ.

—"ಕನ್ನಡಪ್ರಭ"

ನಮ್ಮಲ್ಲಿ ಕೆಲವರು ಇಂದಿರಾಗಾಂಧಿಯವರ ನಿಜವಾದ ಬಣ್ಣವನ್ನು 1969ರಲ್ಲಿ ಕಂಡರೆ ಇನ್ನು ಕೆಲವರು 1978ರಲ್ಲಿ ಮನಗಂಡರು. ಇನ್ನೂ ಕೆಲವರು 1979ರಲ್ಲಿ ಕಾಣುತ್ತಿದ್ದಾರೆ.

(ಇತ್ತೀಚಿನ ಕಾಂಗ್ರೆಸ್ ವಿದ್ಯಮಾನಗಳನ್ನು ಕುರಿತು ಜನತಾಪಕ್ಷದ ಪ್ರಧಾನ ಕಾರ್ಯದರ್ಶಿ)
—ರಾಮಕೃಷ್ಣ ಹೆಗಡೆ

ಕಳೆದ ಎರಡುವರೆ ತಿಂಗಳಲ್ಲಿ ದಿನನಿತ್ಯ ಬಳಕೆಯ ಪದಾರ್ಥಗಳು ಶೇ. 7.37ರಷ್ಟು ಹೆಚ್ಚಿವೆ.

(ಯೋಜನಾ ಆಯೋಗದ ಉಪಾಧ್ಯಕ್ಷ)
ಪ್ರೊ|| ಡಿ. ಲಕ್ಡಾವಾಲ

ಪಶ್ಚಿಮಬಂಗಾಳದಲ್ಲಿ ಕಾನೂನು ಮತ್ತು ಶಿಸ್ತುಪಾಲನೆ ಹದಗೆಟ್ಟಿದೆ ಎಂದು ಉಯಿಲೆಬ್ಬಿಸುತ್ತಾರೆ ಜನತಾ–ಕಾಂಗ್ರೆಸ್ ಮತ್ತು ಕಾಂಗ್ರೆಸ್ (ಐ)ನ ನಾಯಕರುಗಳು. ಆದರೆ ಸಿ.ಪಿ.ಐ. (ಎಂ) ನೇತೃತ್ವದ ಎಡರಂಗ ಸರ್ಕಾರವು ಅಧಿಕಾರಕ್ಕೆ ಬಂದ 23 ತಿಂಗಳುಗಳ ಅವಧಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮತ್ತು ಅದರ ಮಿತ್ರಪಕ್ಷಗಳ 73 ಜನ ಕಾರ್ಯಕರ್ತರ ಕಗ್ಗೊಲೆ ನಡೆದಿದೆ. ವಸ್ತುಸ್ಥಿತಿ ಹೀಗಿರುವಾಗ ಕಾನೂನು ಮತ್ತು ಶಿಸ್ತುಭಂಗ ಹೂಡುತ್ತಿರುವವರು ಯಾರೆಂದು ಬಿಡಿಸಿ ಹೇಳಬೇಕಾಗಿಲ್ಲ.

ಸಿ.ಪಿ.ಐ. (ಎಂ)ನ ರಾಷ್ಟ್ರೀಯ ಮುಖಪತ್ರಿಕೆ
—"ಪೀಪಲ್ಸ್ ಡೆಮಾಕ್ರಸಿ"ಯಲ್ಲಿ ಮುಖ್ಯ ಲೇಖನ

ಮಿಶ್ರಾ ಕೊಲೆ ಪ್ರಕರಣ ಮರು ತನಿಖೆಗೆ ಆಗ್ರಹ

ನ್ಯಾಯವಾದಿ ಶ್ರೀ ವಿ. ಎಮ್. ತಾರ್ಕುಂಡೆಯವರ ವರದಿಯಿಂದ ಬೆಳಕಿಗೆ ಬಂದ ವಿಚಾರಗಳ ಹಿನ್ನೆಲೆಯಲ್ಲಿ ಕೇಂದ್ರದ ಮಂತ್ರಿಯಾಗಿದ್ದ ದಿವಂಗತ ಎಲ್. ಎನ್. ಮಿಶ್ರ ಅವರ ಕೊಲೆಯ ಬಗ್ಗೆ ವಿಚಾರಣೆಯನ್ನು ಮತ್ತೆ ಪ್ರಾರಂಭಿಸಬೇಕು ಹಾಗೂ ಹೊಸ ತನಿಖೆಯನ್ನು ನಡೆಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ಸರಕಾರವನ್ನು ಒತ್ತಾಯಿಸಿದೆ.

ತಾರ್ಕುಂಡೆ ವರದಿ ಪ್ರಕಾರ ಮಿಶ್ರ ಕೊಲೆ ಪ್ರಕರಣದಲ್ಲಿ ತನಿಖೆಯು ಪ್ರಾರಂಭವಾದಾಗ ಹಿಂದಿನ ಪ್ರಧಾನ ಮಂತ್ರಿಯವರ ಸಮೀಪವರ್ತಿಗಳು ಮತ್ತು ಉನ್ನತ ಅಧಿಕಾರಿಗಳನ್ನು ವಿಚಾರಣೆಗೊಳಪಡಿಸುವ ಹಂತಕ್ಕೆ ಬಂದಿತ್ತು. ಆಗ ಆಶ್ಚರ್ಯಕರ ರೀತಿಯಲ್ಲಿ ತನಿಖೆಯ ಕ್ರಮವನ್ನೆ ಸಂಪೂರ್ಣ ಬದಲಾಯಿಸಲಾಯಿತು. ಇದು ನಿಜವಾದರೆ, ಈ ಘಟನೆಯನ್ನೂ ತುರ್ತುಪರಿಸ್ಥಿತಿ ಅತಿರೇಕದ ಬಗ್ಗೆ ವಿಚಾರಣೆ ನಡೆಸಲು ನಿರ್ಮಿಸಲಾದ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಿಸಬೇಕು. ತಪ್ಪಿತಸ್ಥರನ್ನು ಮುಚ್ಚಿಟ್ಟು, ಬೇರೆಯವರ ಮೇಲೆ ಆರೋಪ ಹೊರಿಸಲು ಉನ್ನತಾಧಿಕಾರದಲ್ಲಿರುವವರು ನಡೆಸಿದ ಹೇಯಕೃತ್ಯವಿದಾಗಿದೆ.

ಇದೇ ಕಾರಣದಿಂದ ಕಾಂಗ್ರೆಸ್ (ಐ)ಯ ವಕ್ತಾರರು ಮರುತನಿಖೆಯನ್ನು ವಿರೋಧಿಸುತ್ತಾರೆ. ಮರು ತನಿಖೆಯನ್ನು ನಡೆಸದಂತೆ ಒತ್ತಾಯ ತರುವ ಶಕ್ತಿಗಳಿಗೆ ಸರಕಾರವು ಬಲಿಬೀಳದೆ ಮಿಶ್ರಾ ಕೊಲೆ ಪ್ರಕರಣವನ್ನು ಮರು ತನಿಖೆಗೆ ಒಳಪಡಿಸಲಾಗುವುದೆಂದು ಪಾಲಿಟ್ ಬ್ಯೂರೊ ಆಶಿಸುತ್ತದೆ. ●

…ಸಾಂಕೇತಿಕ ಮುಷ್ಕರ

(1ನೇ ಪುಟದಿಂದ)

ಮಿಲ್ಲುಗಳಲ್ಲಿ ಮುಷ್ಕರವು ಸಂಪೂರ್ಣ ಯಶಸ್ವಿಯಾಯಿತು. ನೂರಕ್ಕೆ ನೂರು ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ಮುಷ್ಕರ ಯಶಸ್ವಿಯಾಗುವಂತೆ ಮಾಡಲು ಸ್ವಯಂ ಸೇವಕರ ತಂಡಗಳು 12ರ ಮಧ್ಯ ರಾತ್ರಿಯಿಂದಲೇ ಶ್ರಮಿಸಿದ್ದುವು. ನೆಹರು ಪಾರ್ಕಿನಲ್ಲಿ ಬಹಿರಂಗ ಸಭೆ ಸೇರಲು ಪೋಲೀಸ್ ಅಧಿಕಾರಿಗಳ ಅನುಮತಿ ನಿರಾಕರಿಸಿದ್ದರಿಂದ, ಬಹಿರಂಗ ಸಭೆಯನ್ನು ಸಮೀಪದಲ್ಲಿರುವ ಸರ್ವೋದಯ ಅಶ್ರಮದ ವಠಾರದಲ್ಲಿ ನಡೆಸಬೇಕಾಯಿತು. ಬಹಿರಂಗ ಸಭೆಯೂ ಯಶಸ್ವಿಯಾಗಿ ನೆರವೇರಿತು.

ಹದಿಮೂರರಂದಿನ ಯಶಸ್ವಿ ಮುಷ್ಕರ ಮತ್ತು ಕಾರ್ಮಿಕರ ಒಗ್ಗಟ್ಟಿನ ಪರಿಣಾಮವಾಗಿ ಮ್ಯಾನೇಜುಮೆಂಟು ಇದೀಗ ಸಮನ್ವಯ ಸಮಿತಿಯೊಡನೆ ಮಾತುಕತೆಗೆ ಒಪ್ಪಿದೆ, ಮೊದಲ ತ್ರಿಪಕ್ಷೀಯ ಸಭೆಯನ್ನು ಜ್ಯೋಂಟ್ ಲೇಬರ್ ಕಮಿಷನರವರ ಸಮ್ಮುಖದಲ್ಲಿ 19-6-79 ರಂದು ಕರೆಯಲಾಗಿದೆ. ಹದಿಮೂರರಂದಿನ ಮುಷ್ಕರವು ಹಲವು ದಶಕಗಳಲ್ಲೆ ಮೊದಲನೆಯದಾಗಿದೆ. ಮ್ಯಾನೇಜುಮೆಂಟಿನ ವಿಭಜಿಸಿ ಆಳುವ ನೀತಿ, ಪೋಲೀಸರು ಭಯದ ವಾತಾವರಣವನ್ನುಂಟುಮಾಡುವುದು ಮೊದಲಾದವುಗಳಿಂದ ಧೃತಿಗೆಡದೆ ಸಂಯುಕ್ತ ಚಳುವಳಿಯನ್ನು ನಡೆಸುತ್ತಲ್ಲಿರುವ ಹತ್ತಿಗಿರಣಿ ಕಾರ್ಮಿಕರ ಹೋರಾಟ ನಗರದ ಮತ್ತು ರಾಜ್ಯದ ಕಾರ್ಮಿಕ ಹೋರಾಟಗಳಿಗೆ ಒಂದು ಸ್ಫೂರ್ತಿ. ○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-